aglasem.com

FOR KARNATAKA CLASS 10 PREPARATION

Karnataka SSLC Model Question Paper 2027 for Kannada First Language (Paper 2) Key Answers

EXAM	YEAR	TYPE	SUBJECT
Karnataka Class 10	2027	Answer Key	Kannada

01-K

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

KARNATAKA SCHOOL EXAMINATION AND ASSESSMENT BOARD

6th Cross, Malleshwaram, Bengaluru – 560 003

2026-27 ರ ಎಸ್. ಎಸ್. ಎಲ್. ಸಿ. ಮಾದರಿ ಪ್ರಶ್ನೆಪತ್ರಿಕೆ 2 ಕ್ಕೆ ಮಾದರಿ ಉತ್ತರಗಳು

2026-27 SSLC MODEL QUESTION PAPRER 2 MODEL ANSWERS

ವಿಷಯ ಸಂಕೇತ : **01-K** **Subject Code : 01-K**

ವಿಷಯ : ಪ್ರಥಮ ಭಾಷೆ — **ಕನ್ನಡ**

Subject : First Language — KANNADA

ಸಮಯ : 3 ಗಂಟೆ 15 ನಿಮಿಷಗಳು] [Time : 3 Hours 15 Minutes

ಗರಿಷ್ಠ ಅಂಕಗಳು : 100] [Max. Marks : 100

[Turn over

01-K

I. ಬಹುಆಯ್ಕೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : **6 X 1 = 6**

1. ವಿಜಾತೀಯ ಸಂಯುಕ್ತಾಕ್ಷರಕ್ಕೆ ಸೇರಿದ ಪದವಿದು

(ಎ) ಅಚ್ಚರಿ (ಬಿ) ಎಚ್ಚರ

(ಸಿ) ಬಣ್ಣ (ಡಿ) ಶಾಸ್ತ್ರ

ಉತ್ತರ : (ಡಿ) ಶಾಸ್ತ್ರ

2. 'ಮಾತಂತು' ಪದವು ಈ ಸಂಧಿಯದ್ದಾಗಿದೆ

(ಎ) ಲೋಪ (ಬಿ) ಆಗಮ

(ಸಿ) ಆದೇಶ (ಡಿ) ಗುಣ

ಉತ್ತರ : (ಎ) ಲೋಪ

3. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿರುವ ವಾಕ್ಯ

(ಎ) ಸಂಯೋಜಿತವಾಕ್ಯ (ಬಿ) ಸಾಮಾನ್ಯವಾಕ್ಯ

(ಸಿ) ಮಿಶ್ರವಾಕ್ಯ (ಡಿ) ಸಂಯುಕ್ತವಾಕ್ಯ

ಉತ್ತರ : (ಸಿ) ಮಿಶ್ರವಾಕ್ಯ

4. ವಿಧ್ಯರ್ಥಕ ಕ್ರಿಯಾರೂಪಕ್ಕೆ ಉದಾಹರಣೆ

(ಎ) ಓದನು (ಬಿ) ಓದಲಿ

(ಸಿ) ಓದಿಯಾನು (ಡಿ) ಓದಿದನು

ಉತ್ತರ : (ಬಿ) ಓದಲಿ

5. 'ರಾಮನತ್ತಣಿಂ' ಪದದಲ್ಲಿರುವ ವಿಭಕ್ತಿ

(ಎ) ಪಂಚಮೀ (ಬಿ) ಸಪ್ತಮೀ

(ಸಿ) ತೃತೀಯಾ (ಡಿ) ದ್ವಿತೀಯಾ

ಉತ್ತರ : (ಎ) ಪಂಚಮೀ

6. ತತ್ಪುರುಷ ಸಮಾಸಕ್ಕೆ ಸೇರಿದ ಪದ

(ಎ) ಕೈಯಾನು (ಬಿ) ಮುಕ್ಕಣ್ಣ

(ಸಿ) ತಲೆನೋವು (ಡಿ) ನೇಯ್ದುವಸ್ತ್ರ

ಉತ್ತರ : (ಸಿ) ತಲೆನೋವು

II. ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) : **4 X 1 = 4**

7. ಅಮೃತ : ಅಮರ್ದು : : ಆರ್ಯ : ..... .

ಉತ್ತರ : ಅಜ್ಜ

8. ನಾವು : ಪುರುಷಾರ್ಥಕ ಸರ್ವನಾಮ : : ತಾವು : ..... .

ಉತ್ತರ : ಆತ್ಮಾರ್ಥಕ ಸರ್ವನಾಮ

9. ಹಗಲಿರುಳು : ಜೋಡುನುಡಿ : : ಇರುಳಿರುಳು : ..... .

ಉತ್ತರ : ದ್ವಿರುಕ್ತಿ

10. ಉಡುಗೆ : ಕೃದಂತ ಭಾವನಾಮ : : ಚೆಲುವಿಕೆ : ..... .

ಉತ್ತರ : ತದ್ಧಿತಾಂತ ಭಾವನಾಮ

III. ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) : **7 X 1 = 7**

11. ಕನ್ನಡ ಭಾಷೆಗೆ ಪರ್ಷಿಯನ್ ಶಬ್ದಗಳು ಯಾವಾಗ ಬಂದವು?

ಉತ್ತರ : ಮಹಮ್ಮದೀಯರ ಆಳ್ವಿಕೆಯ ಅವಧಿಯಲ್ಲಿ ಪರ್ಷಿಯನ್ ಭಾಷೆಯಿಂದ ಅನೇಕ ಶಬ್ದಗಳು ಕನ್ನಡ ಭಾಷೆಗೆ ಬಂದಿವೆ.

12. ಶಾನುಭೋಗರು ಚಿಕ್ಕನಾಯಕನಹಳ್ಳಿಗೆ ಏಕೆ ಹೋಗಿದ್ದರು?

ಉತ್ತರ : ಶಾನುಭೋಗರು ಚಿಕ್ಕನಾಯಕನಹಳ್ಳಿಗೆ ಇರಸಾಲಿಗಾಗಿ ಹೋಗಿದ್ದರು.

13. ಲಂಡನ್ ನಗರದಲ್ಲಿ ನೆಲ್ಸನ್ ಅವರ ಮೂರ್ತಿಯಿರುವ ಸ್ಥಳದ ಹೆಸರೇನು?

ಉತ್ತರ : ಲಂಡನ್ ನಗರದಲ್ಲಿ ನೆಲ್ಸನ್ ಅವರ ಮೂರ್ತಿಯಿರುವ ಸ್ಥಳದ ಹೆಸರು 'ಟ್ರಾಫಲ್ಗಾರ್ ಸ್ಕ್ವೇರ್.

01-K

14. ಸೂರ್ಯಮಿತ್ರನು ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಎಂದು ಹೇಳಲು ಕಾರಣವೇನು?

ಉತ್ತರ : ಅಗ್ನಿಭೂತಿ ಮತ್ತು ವಾಯುಭೂತಿಯರು ಸೋದರಮಾವನೆಂಬ ಸಲುಗೆಯಿಂದ ಮೊದಲಿನಂತೆ ಗರ್ವಿಷ್ಠರಾಗಿ ಕೆಟ್ಟು ಹೋಗುವರೆಂದು ಭಾವಿಸಿ ಸೂರ್ಯಮಿತ್ರನು ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಎಂದು ಹೇಳಿದನು.

15. ಕುಂಪಣಿ ಸರ್ಕಾರ ಹೊರಡಿಸಿದ ಆದೇಶ ಯಾವುದು?

ಉತ್ತರ : ಕುಂಪಣಿ ಸರ್ಕಾರ ನಿಶ್ಶಸ್ತ್ರೀಕರಣದ ಆದೇಶ ಹೊರಡಿಸಿತು.

16. ದ್ರೋಣರು ಯಾರೊಡನೆ ಪರಶುರಾಮನ ಬಳಿಗೆ ಬಂದರು?

ಉತ್ತರ : ದ್ರೋಣರು ಮಗನಾದ ಅಶ್ವತ್ಥಾಮನೊಡನೆ ಪರಶುರಾಮನ ಬಳಿಗೆ ಬಂದರು.

17. ಪುಟ್ಟ ಪೋರಿಯ ಅಮ್ಮನ ತೂತು ಬಿದ್ದ ಸೀರೆಯಲ್ಲಿ ಯಾರು ಸೊರಗಿದ್ದಾರೆ?

ಉತ್ತರ : ಪುಟ್ಟ ಪೋರಿಯ ಅಮ್ಮನ ತೂತು ಬಿದ್ದ ಸೀರೆಯಲ್ಲಿ ಬಾಲರವಿ ಸೊರಗಿದ್ದಾನೆ.

IV. ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :

10 X 2 = 20

18. ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಯ ಲಕ್ಷಣಗಳಾವುವು?

ಉತ್ತರ : ವ್ಯಾವಹಾರಿಕವೆಂದರೆ ಜೀವದ್ಭಾಷೆ. ಅದರಲ್ಲಿ ಜನರು ಮಾತನಾಡುತ್ತಾರೆ. ವ್ಯವಹರಿಸುತ್ತಾರೆ. ಕನ್ನಡ, ತಮಿಳು, ತೆಲುಗು, ತುಳು, ಮರಾಠಿ, ಉರ್ದು, ಇಂಗ್ಲಿಷ್ ಇದಕ್ಕೆ ಉದಾಹರಣೆ. ಎಲ್ಲ ವ್ಯಾವಹಾರಿಕ ಭಾಷೆಗಳು ಗ್ರಾಂಥಿಕವಾಗಬೇಕಿಲ್ಲ. ತುಳು ಒಂದು ಸುಂದರ ವ್ಯಾವಹಾರಿಕ ಭಾಷೆ, ಆದರೆ ಅದು ಗ್ರಾಂಥಿಕ ಭಾಷೆಯಲ್ಲ. ಗ್ರಾಂಥಿಕವೆಂದರೆ ಅಭಿವೃದ್ಧಿ ಹೊಂದಿ ಗ್ರಂಥ ರಚನೆಯಲ್ಲಿ ಉಪಯೋಗವಾದ ಭಾಷೆ, ಸಂಸ್ಕೃತ, ಕನ್ನಡ, ಇಂಗ್ಲಿಷ್, ಪಾಳಿ, ಇತ್ಯಾದಿ ಈ ವರ್ಗಕ್ಕೆ ಉದಾಹರಣೆ. ಎಲ್ಲ ಗ್ರಾಂಥಿಕ ಭಾಷೆಗಳು ಇಂದು ವ್ಯಾವಹಾರಿಕವಾಗಿಲ್ಲ. ಸಂಸ್ಕೃತ ಗ್ರಾಂಥಿಕ ಭಾಷೆಯಾಗಿದ್ದು, ಈಗ ಯಾವೊಂದು ಪ್ರದೇಶದಲ್ಲಿಯೂ ಅದು ವ್ಯಾವಹಾರಿಕ ಭಾಷೆಯಾಗಿಲ್ಲ.

19. ವಿಶ್ವೇಶ್ವರಯ್ಯನವರ ವಿದ್ಯಾಭ್ಯಾಸದ ಬಗ್ಗೆ ಬರೆಯಿರಿ.

ಉತ್ತರ : ಕ್ರಮನಿಷ್ಠತೆ, ಏನನ್ನಾದರೂ ಸಾಧಿಸಬೇಕೆಂಬ ದೃಢನಿರ್ಧಾರ, ಅದಕ್ಕೆ ತಕ್ಕಂತೆ ಪ್ರತಿಭೆ ಮತ್ತು ಮನೋಸ್ಥೈರ್ಯವನ್ನು ಹೊಂದಿರುವ ವಿಶ್ವೇಶ್ವರಯ್ಯನವರ ಪ್ರಾಥಮಿಕ ಶಿಕ್ಷಣ ಚಿಕ್ಕಬಳ್ಳಾಪುರದಲ್ಲಿ ನಡೆಯಿತು. ಬೆಂಗಳೂರಿನ 'ವೆಸ್ಲಿಯನ್ ಪ್ರೌಢಶಾಲೆ'ಯಲ್ಲಿ ಪ್ರೌಢಶಿಕ್ಷಣವನ್ನೂ, 'ಸೆಂಟ್ರಲ್ ಕಾಲೇಜಿ'ನಲ್ಲಿ ಎರಡು ವರ್ಷಗಳ ಇಂಟರ್ ಮೀಡಿಯಟ್ ಮತ್ತು ಮೂರು ವರ್ಷಗಳ ಬಿ. ಎ. ಪದವಿ ಶಿಕ್ಷಣವನ್ನೂ ಪಡೆದರು. ಮೈಸೂರಿನ ದಿವಾನರಾದ ಸಿ. ರಂಗಾಚಾರ್ಲು ಅವರಿಂದ ವಿದ್ಯಾರ್ಥಿವೇತನ ಸೌಲಭ್ಯ ಪಡೆದು ಪೂನಾದ ಎಂಜಿನಿಯರಿಂಗ್ ಕಾಲೇಜಿನಲ್ಲಿ ಡಿಪ್ಲೋಮಾ ಶಿಕ್ಷಣವನ್ನು ಪ್ರಥಮಸ್ಥಾನ ಪಡೆದು 'ಜೇಮ್ಸ ಬರ್ಕ್ಲಿ' ಬಹುಮಾನಕ್ಕೂ ಪಾತ್ರರಾದರು.

20. ಲಂಡನ್ ನಗರದಲ್ಲಿನ ಇಂಡಿಯಾ ಆಫೀಸಿನ ವಿಶೇಷತೆ ತಿಳಿಸಿ.

ಉತ್ತರ : ಲಂಡನ್ ನಗರದ ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ 'ಚೇರಿಂಗ್ ಕ್ರಾಸ್' ಎಂಬ ಓಣಿಯಲ್ಲಿರುವ ಇಂಡಿಯಾ ಆಫೀಸಿನ ವಾಚನಾಲಯದಲ್ಲಿ ಅನೇಕ ಮಹತ್ತ್ವದ ಪುಸ್ತಕಗಳಿವೆ. ಕರ್ನಾಟಕದ ವಿಷಯವಾಗಿ ಎಷ್ಟೋ ಹೊಸ ಮಾತುಗಳು ಇಲ್ಲಿ ಗೊತ್ತಾಗುವುದು. ಇಲ್ಲಿನ ವಸ್ತು ಸಂಗ್ರಹಾಲಯದದಲ್ಲಿ ಹಿಂದೂಸ್ಥಾನದ ಲಲಿತ ಕಲೆಯ ಹಾಗೂ ಇನ್ನುಳಿದ ಮಾರ್ಗಗಳ ಮಾದರಿಗಳು ನೋಡಲು ದೊರೆಯುತ್ತವೆ. ಹಿಂದೂಸ್ಥಾನದಲ್ಲಿ ಪ್ರಕಟವಾಗುವ ಎಲ್ಲ ಮುಖ್ಯವಾದ ಇಂಗ್ಲಿಷ್ ವರ್ತಮಾನ ಪತ್ರಿಕೆಗಳು ಬರುತ್ತವೆ.

21. ಅಗ್ನಿಭೂತಿ ವಾಯುಭೂತಿಯರು ಸೂರ್ಯಮಿತ್ರನಿಂದ ಕಲಿತ ವಿದ್ಯೆಗಳಾವುವು?

ಉತ್ತರ : ಸೂರ್ಯಮಿತ್ರನು ಅಗ್ನಿಭೂತಿ ವಾಯುಭೂತಿಯರಿಗೆ ಒಂದು ಕ್ಷಣವೂ ಬಿಡುವು ಕೊಡದೆ ಹಗಲಿರುಳೆನ್ನದೆ ಓದಿಸಿದನು. ಸೂರ್ಯಮಿತ್ರನಿಂದ ಅವರು ಏಳೆಂಟು ವರ್ಷದೊಳಗೆ ನಾಲ್ಕು ವೇದಗಳು, ವೇದದ ಆರು ಅಂಗಗಳು (ಜ್ಯೋತಿಷ್ಯ, ಕಲ್ಪ, ನಿರುಕ್ತ, ಶಿಕ್ಷಾ, ವ್ಯಾಕರಣ, ಛಂದಸ್ಸು), ಹದಿನೆಂಟು ಧರ್ಮಶಾಸ್ತ್ರಗಳು, ಮೀಮಾಂಸೆ, ತರ್ಕಶಾಸ್ತ್ರ, ವ್ಯಾಕರಣ, ಪ್ರಮಾಣ, ಛಂದಸ್ಸು, ಅಲಂಕಾರ, ನಿಘಂಟು, ಕಾವ್ಯ, ನಾಟಕ, ಕೌಟಿಲ್ಯನ ಅರ್ಥಶಾಸ್ತ್ರ, ಸಾಮುದ್ರಿಕ, ಶಾಲಿಹೋತ್ರ (ಅಶ್ವಶಾಸ್ತ್ರ) ಪಾಳಕಾಪ್ಯ (ಗಜಶಾಸ್ತ್ರ), ವೈದ್ಯಶಾಸ್ತ್ರ ಚರಕ, ಅಶ್ವಿನೀಮತ, ಅಷ್ಟಾಂಗ ಹೃದಯ, ಶುಶ್ರುತನ ವೈದ್ಯಶಾಸ್ತ್ರ ಜೋತಿಷ್ಯ, ಮಂತ್ರವಾದ ಮೊದಲಾದ ಎಲ್ಲ ಶಾಸ್ತ್ರಗಳನ್ನು ಕಲಿತರು.

22. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?

ಉತ್ತರ : ಕಾಲವು ಯುಗಯುಗಗಳ ಹಣೆಬರೆಹವನ್ನು ಅಳಿಸಿ ಹಾಕಿ ಹೊಸತನವನ್ನು, ಹೊಸ ಹಣೆಬರೆಹವನ್ನು ಬರೆದು ಎಲ್ಲರಿಗೂ ಬದಲಾವಣೆಯಾಗುವ ಒಳ್ಳೆಯ ಭಾಗ್ಯವನ್ನು ತೆರೆದು ಕೊಟ್ಟಿದೆ. ತನ್ನ ರೆಕ್ಕೆ ಬೀಸುತ, ಮೇಲಕ್ಕೆ ಹಾರುತ್ತ ಈ ಹೊಸಗಾಲದ ಹಸುಮಕ್ಕಳಿಗೆ ಹೊಸ ಚೇತನವನ್ನು ನೀಡುತ್ತ, ಉತ್ತಮ ಭವಿಷ್ಯಕ್ಕಾಗಿ ಹರಸಿದೆ.

[Turn over

01-K

23. ಹಲಗಲಿಗೆ ದಂಡು ಬರಲು ಕಾರಣವೇನು?

ಉತ್ತರ : ಹಲಗಲಿಯ ಬೇಡರಾದ ಪೂಜೇರಿ ಹನುಮ, ಬ್ಯಾಡರ ಬಾಲ, ರಾಮ, ಜಡಗ ಇವರು ಬ್ರಿಟಿಷ್ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದರು. ಈ ದಂಗೆಯನ್ನು ಹತ್ತಿಕ್ಕಲು ಬಂದ ಕಾರಕೂನನ ಕಪಾಳಕ್ಕೆ ಹೊಡೆದು ಸಿಪಾಯಿಯನ್ನು ಹೊಡೆದುರುಳಿಸಿದರು. ಇದರಿಂದ ಕೋಪಗೊಂಡ ಕುಂಪಣಿ ಸರ್ಕಾರದ ಅಧಿಕಾರಿಗಳು ಹಲಗಲಿಯ ಬೇಡರ ದಂಗೆಯನ್ನು ಬಗ್ಗುಬಡಿಯಲು ದಂಡನ್ನು ಕರೆಯಿಸಿದರು.

24. ಬಾಲಕ ಭಗತ್‌ಸಿಂಗ್ ಜಲಿಯನ್ ವಾಲಾಬಾಗ್‌ನಿಂದ ಮಣ್ಣನ್ನು ತಂದ ಸಂದರ್ಭವನ್ನು ವಿವರಿಸಿ.

ಉತ್ತರ : ಅಮೃತಸರದಲ್ಲಿ ಪರಿಸ್ಥಿತಿ ಪ್ರಕ್ಷುಬ್ಧವಾಗಿತ್ತು. ಎಲ್ಲ ಕಡೆ ಪೋಲಿಸರ ಜಮಾವಣೆಯಾಗಿತ್ತು. ಭಗತ್‌ಸಿಂಗ್ ಪೋಲಿಸರ ಕಣ್ಣು ತಪ್ಪಿಸಿ ಜಲಿಯನ್ ವಾಲಾಬಾಗ್ ಹತ್ಯಾಕಾಂಡ ನಡೆದ ಸ್ಥಳಕ್ಕೆ ಹೋದನು. ಅಲ್ಲಿ ರಕ್ತದಿಂದ ತೊಯ್ದ ಒಂದು ಚಿಟಿಕೆ ಮಣ್ಣನ್ನು ತೆಗೆದು ತನ್ನ ಹಣೆಯ ಮೇಲೆ ತಿಲಕವನ್ನಿಟ್ಟುಕೊಂಡು ಕಣ್ಮುಚ್ಚಿ ಭಕ್ತಿಯಿಂದ ತಲೆಬಾಗಿ ಕೈ ಮುಗಿದು, ಹುತಾತ್ಮರಿಗೆ ಗೌರವ ಸಲ್ಲಿಸಿದನು. ಪೂಜ್ಯನೀಯ ಆ ಮಣ್ಣನ್ನು ತನ್ನ ಊಟದ ಡಬ್ಬದಲ್ಲಿ ಮನೆಗೆ ತಂದನು. ಅದು ತನಗೆ ದೊರೆತ ಪಾರಿತೋಷಕವೆಂಬಂತೆ ತಿಳಿದಿದ್ದನು.

25. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಹೇಗೆ ಸ್ಥಿರವಾಗುವುದು?

ಉತ್ತರ : ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗಬೇಕಾದರೆ ದೇಶದ ಭಾಷೆಯಲ್ಲಿ ಜನರಿಗೆ ಭಾವನೆಗಳನ್ನು ನೀಡಬೇಕು. ಆಗ ಅವರು ವಿಷಯಗ್ರಹಣ ಮಾಡಿಕೊಳ್ಳುವರು. ಅವರಿಗೆ ಮತ್ತೊಂದು ಅವಶ್ಯಕತೆ ಇದೆ. ಅದು ಸಂಸ್ಕೃತಿ. ನಾವು ಅವರಿಗೆ ಈ ಸಂಸ್ಕೃತಿಯನ್ನು ಕೊಡುವ ತನಕ ಅವರ ಪ್ರಗತಿ ಸ್ಥಿರವಾಗಲಾರದು. ಏಕೆಂದರೆ ಸಂಸ್ಕೃತಿ ಮಾತ್ರ ಆಘಾತವನ್ನು ಸಹಿಸಬಲ್ಲದು. ಕೇವಲ ಜ್ಞಾನರಾಶಿಗೆ ಅದನ್ನು ಎದುರಿಸುವ ಶಕ್ತಿ ಇಲ್ಲ. ಸಂಸ್ಕೃತಿಯು ರಕ್ತದಲ್ಲಿ ಹರಿಯಬೇಕು. ಆಗ ಮಾತ್ರ ದೇಶದ ಪ್ರಗತಿ ಸ್ಥಿರವಾಗುವುದು ಎಂಬುದು ವಿವೇಕಾನಂದರ ದೃಷ್ಟಿಯಾಗಿದೆ.

26. ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ಹೇಗೆ ವ್ಯಕ್ತಗೊಂಡಿದೆ?

ಉತ್ತರ : ಚಂದನವನ್ನು ಕಡಿದು, ಕೊರೆದು, ತೇದರೂ ನೊಂದು ಅದು ತನ್ನ ಸುವಾಸನೆ ಬಿಡುವುದಿಲ್ಲ. ಸುವರ್ಣವನ್ನು ಕಡಿದು, ಅರೆದು, ಬೇಯಿಸಿದರೂ ಕಳಂಕ ಹೊಂದುವುದಿಲ್ಲ. ಕಬ್ಬನ್ನು ಸಂದು ಸಂದು ಕಡಿದು ಗಾಣದಲ್ಲಿಟ್ಟು ಅರೆದು ಪಾಕ ಮಾಡಿ, ಅದು ಸಕ್ಕರೆಯಾದ ಮೇಲೆ ತಾನು ನೊಂದಿದ್ದ ಕಾರಣ ಸಿಹಿ ಬಿಡುವುದಿಲ್ಲ. ಹಾಗೆಯೇ ನನ್ನ ಹೀನತೆ ತಿಳಿಸಿ ಕೊಂದರೂ ನಾನು ನಿನ್ನಲ್ಲಿ ಶರಣಾಗುವುದನ್ನು ಬಿಡುವುದಿಲ್ಲ ಎಂದು ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ವ್ಯಕ್ತವಾಗಿದೆ.

27. ಗುರೂಪದೇಶದ ಗುಣಗಳನ್ನು ಪಟ್ಟಿ ಮಾಡಿ.

ಉತ್ತರ : ಸಜ್ಜನರಿಗೆ ಗುರುವಚನ ಎನ್ನುವುದು ಕಿವಿಗೆ ಒಂದು ಆಭರಣ. ಅದರಿಂದ ಅವರ ಶ್ರೀಮುಖ ಇನ್ನಷ್ಟು ಶ್ರೀಮಂತವಾಗುತ್ತದೆ. ಮುಸ್ಸಂಜೆಯ ಚಂದ್ರ ಕತ್ತಲನ್ನು ಕಳೆವಂತೆ, ಬಗೆಯ ಕೊಳೆಯನ್ನೆಲ್ಲ ಹಿತವಚನ ತೊಳೆದುಬಿಡುತ್ತದೆ. ಆಗ ಬಾಳಿನಲ್ಲಿ ಸಂಯಮ, ಪಕ್ವತೆ, ಶಾಂತಿ ಕಾಣಿಸಿಕೊಳ್ಳುತ್ತದೆ. ಗುರೂಪದೇಶ ಎಂದರೆ ಜನರ ಒಳ ಹೊರಗಣ ಕೊಳೆಗಳನ್ನು ತೊಳೆದು ಬಿಡುವ ನೀರಿಲ್ಲದ 'ಮೀಹ' ತಲೆ ನೆರೆಯದೆ, ಮೈ ಸುಕ್ಕುಗಟ್ಟದೆ ಮೂಡುವ ಮುಪ್ಪು; ಬೊಜ್ಜು ಬೆಳೆಯದೆ ಬರುವ ಗುರುತ್ವ; ಬಂಗಾರವಿಲ್ಲದೆ ಮಾಡಿದ ಬೆಲೆ ಬಾಳುವ ಕಿವಿಯೋಲೆ; ಪಂಜು ಇಲ್ಲದೆ ಬೆಳಗುವ ಬೆಳಕು; ಉದ್ವೇಗ ಬರಿಸದ ಜಾಗರಣೆ.

V. ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು : 2 X 3 = 6

28. ಡಿ. ಎಸ್. ಜಯಪ್ಪಗೌಡ

ಉತ್ತರ : **ಡಿ. ಎಸ್. ಜಯಪ್ಪಗೌಡ :** ದಾರದಹಳ್ಳಿ ಸುಬ್ಬೆಗೌಡ ಜಯಪ್ಪಗೌಡ ಅವರು ಸಾ. ಶ. ೧೯೪೭ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ದಾರದಹಳ್ಳಿಯಲ್ಲಿ ಜನಿಸಿದರು. ಶ್ರೀಯುತರು 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು, ಕರ್ನಾಟಕ ಗ್ರಾಮೀಣ ಸಂಸ್ಥೆಗಳು, ಕರ್ನಾಟಕದ ಕಡಲಾಚೆಯ ಸಂಪರ್ಕಗಳು, ಜನಪದ ಆಟಗಳು' ಮೊದಲಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಧಾರವಾಡ ಕರ್ನಾಟಕ ಸಂಘದ ಸಂಶೋಧನಾ ಬಹುಮಾನಗಳು ಲಭಿಸಿವೆ.

29. ರನ್ನ

ಉತ್ತರ : **ರನ್ನ :** ಕವಿ ರನ್ನನು ಸಾ. ಶ. ಸುಮಾರು ೯೪೯ ರಲ್ಲಿ (೧೦ನೇ ಶತಮಾನದಲ್ಲಿ) ಬಾಗಲಕೋಟೆ ಜಿಲ್ಲೆಯ ಮುದುವೊಳಲು (ಈಗಿನ ಮುಧೋಳ) ಎಂಬ ಗ್ರಾಮದಲ್ಲಿ ಜನಿಸಿದನು. ಈತನು 'ಸಾಹಸ ಭೀಮ ವಿಜಯಂ (ಗದಾಯುದ್ಧ), ಅಜಿತತೀರ್ಥಂಕರ ಪುರಾಣತಿಲಕಂ, ಪರಶುರಾಮಚರಿತಂ, ಚಕ್ರೇಶ್ವರಚರಿತಂ, ರನ್ನಕಂದ' ಎಂಬ ಕೃತಿಗಳನ್ನು ರಚಿಸಿದ್ದಾನೆ. ಇವನಿಗೆ ಚಾಲುಕ್ಯ ದೊರೆ ತೈಲಪನು 'ಕವಿಚಕ್ರವರ್ತಿ' ಎಂಬ ಬಿರುದನ್ನು ನೀಡಿ ಗೌರವಿಸಿರುವನು.

01-K

VI. ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು : **1 X 3 = 3**

30. ಬಿಸುಡದಿರು ಬಿಸುಡದಿರು ಬೇಡಬೇಡಕಟಕಟ
ಹಸುಳೆ ನೊಂದಹನೆಂದು ಬೀಳ್ವವನನೆತ್ತಿ ತ
ಕ್ಕಿಸಿಕೊಂಡು ಕುಲವ ನೋಡದೆ ಬೇಡಿಕೊಂಬೆನಿವನೆನ್ನ ಮಗನಲ್ಲ ನಿನ್ನ

ಉತ್ತರ :

ಯ	ಯ	ಯ	ಯ	
UU UU U	UU UU U	- U -	UUUUU	= ೨೦
ಬಿಸುಡದಿರು	ಬಿಸುಡದಿರು	ಬೇಡಬೇ	ಡಕಟಕಟ	

ಯ	ಯ	ಯ	ಯ	
UU U -	UU - U	- UU U	- U -	= ೨೦
ಹಸುಳೆನೊಂ	ದಹನೆಂದು	ಬೀಳ್ವವನ	ನೆತ್ತಿತ	

ಯ	ಯ	ಯ	ಯ	ಯ	ಯ	೨
UU - U	UU U -	U U- U	- UUU	- UUU	- U -	-
ಕ್ಕಿಸಿಕೊಂಡು	ಕುಲವನೋ	ಡದೆಬೇಡಿ	ಕೊಂಬೆನಿವ	ನೆನ್ನಮಗ	ನಲ್ಲನಿ	ನ್ನ = ೩೨

ಛಂದಸ್ಸು : ಇದು ಮಾತ್ರಾಗಣ ಆಧಾರಿತ 'ವಾರ್ಧಕ ಷಟ್ಪದಿ'ಯ ಲಕ್ಷ್ಯವಾಗಿದೆ.

VII. ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯ ಮಾಡುವುದು : **1 X 3 = 3**

31. "ಸೀತೆಯ ಮುಖಕಮಲ ಅರಳಿತು"

ಉತ್ತರ : ಅಲಂಕಾರದ ಹೆಸರು : ರೂಪಕಾಲಂಕಾರ

ಲಕ್ಷಣ : ಅತಿ ಸಾಮ್ಯದಿಂದಾಗಿ ಉಪಮೇಯ ಉಪಮಾನಗಳಲ್ಲಿ ಅಭೇದವನ್ನು ಹೇಳಿ ವರ್ಣಿಸುವುದೇ ರೂಪಕಾಲಂಕಾರ.

ಸಮನ್ವಯ : ಉಪಮೇಯ : ಸೀತೆಯ ಮುಖ
ಉಪಮಾನ : ಕಮಲ

ಇಲ್ಲಿ ಉಪಮೇಯವಾದ 'ಸೀತೆಯ ಮುಖ' ಹಾಗೂ ಉಪಮಾನವಾದ 'ಕಮಲ' ಇವೆರಡರ ನಡುವೆ ಅಭೇದವನ್ನು ರೂಪಿಸಿರುವುದರಿಂದ ಇದು 'ರೂಪಕಾಲಂಕಾರದ' ಲಕ್ಷ್ಯವಾಗಿದೆ.

VIII. ಗಾದೆಯನ್ನು ವಿಸ್ತರಿಸಿ ಬರೆಯುವುದು : **1 X 3 = 3**

32. ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ.

ಅಥವಾ

ಇರುಳು ಕಂಡ ಬಾವಿಗೆ ಹಗಲು ಬಿದ್ದಂತೆ.

ಉತ್ತರ : ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ : ಗಾದೆ ವೇದಕ್ಕೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ. ಗಾದೆ ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಯಾವುದೇ ಒಂದು ಉತ್ತಮ ಕೆಲಸ ಮಾಡುವುದು ತುಂಬಾ ಕಠಿಣ. ಆದರೆ ಅದೇ ಕೆಲಸವನ್ನು ಹಾಳು ಮಾಡುವುದು ಸುಲಭ ಎಂಬುದನ್ನು ಪ್ರಸ್ತುತ ಗಾದೆಯು ತಿಳಿಸುತ್ತದೆ.

ಮನುಷ್ಯನು ತನ್ನ ಉತ್ತಮವಾದ ಜೀವನದ ಭವಿಷ್ಯವನ್ನು ನಿರ್ಮಿಸಲು ಜೀವನವೆಲ್ಲ ಕಷ್ಟಪಡಬೇಕು. ಆದರೆ ವ್ಯಕ್ತಿತ್ವ ಹಾಳು ಮಾಡಿಕೊಳ್ಳುವುದಕ್ಕೆ ಒಂದರೆಗಳಿಗೆ ಸಾಕು. "ಕಟ್ಟುವುದು ಕಠಿಣ ; ಕೆಡಿಸುವುದು ಸುಲಭ" ಎಂಬ ಗಾದೆಯು ಇದೇ ಅರ್ಥವನ್ನು ಹೋಲುತ್ತದೆ. ಒಬ್ಬ ಕುಂಬಾರ ಮಡಕೆಗಳನ್ನು ಮಾಡಲು ಮಣ್ಣು ತಂದು ಹರಳನ್ನು ಬೇರ್ಪಡಿಸಿ ಮಣ್ಣನ್ನು ಹದಮಾಡಿ ಕಷ್ಟಪಟ್ಟು ಮಡಿಕೆಯನ್ನು ಮಾಡುತ್ತಾನೆ. ಆದರೆ ಆ ಮಡಿಕೆಯನ್ನು ಒಡೆಯಲು ಒಂದು ದೊಣ್ಣೆ ಪೆಟ್ಟು ಸಾಕು. ಒಂದು ಕಾರ್ಯ ಯಶಸ್ವಿಯಾಗಲು ಬಹಳ ಶ್ರಮವೂ, ಸಮಯವೂ ಅತ್ಯಗತ್ಯ. ಪ್ರಾಚೀನ ಭಾರತೀಯರು ಕಠಿಣ ಶ್ರಮವಹಿಸಿ ಬಹಳ ಸಮಯ ನೀಡಿ ಭಾರತದ ಪ್ರಾಚೀನ ವಾಸ್ತುಶಿಲ್ಪಗಳನ್ನು ನಿರ್ಮಿಸಿದರು. ಆದರೆ ವಿದೇಶಿಯರು ಒಂದು ಕ್ಷಣ ಮಾತ್ರದಲ್ಲಿ ವಾಸ್ತುಶಿಲ್ಪಗಳನ್ನು ಕೆಡವಿಹಾಕಿದರು. ಒಂದು ಕೊಡ ಹಾಲು ಕೆಡಲು ತೊಟ್ಟು ಹುಳಿ ಸಾಕಲ್ಲವೇ? ಆದ್ದರಿಂದ ಮಾನವ ತನ್ನ ಘನತೆಯನ್ನರಿತು ಕಾರ್ಯನಿರ್ವಹಿಸಬೇಕು ಎಂಬುದನ್ನು ಪ್ರಸ್ತುತ ಗಾದೆಯು ತಿಳಿಸುತ್ತದೆ.

ಅಥವಾ

[Turn over

01-K

ಇರುಳು ಕಂಡ ಬಾವಿಗೆ ಹಗಲು ಬಿದ್ದಂತೆ : ಗಾದೆ ವೇದಕ್ಕೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ. ಗಾದೆ ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ತಿಳಿದೂ ತಿಳಿದೂ ತಪ್ಪು ಮಾಡುವ ಮನುಷ್ಯನ ಮೂರ್ಖತನವನ್ನು ಈ ಗಾದೆಯು ಅತ್ಯಂತ ಮಾರ್ಮಿಕವಾಗಿ ಅಣಕಿಸುತ್ತದೆ ಮತ್ತು ಎಚ್ಚರಿಸುತ್ತದೆ.

ಬಾವಿ ಎಲ್ಲಿದೆ ಎಂದು ರಾತ್ರಿಯೇ ನಮಗೆ ಗೊತ್ತಿದ್ದರೂ, ಸೂರ್ಯನ ಬೆಳಕಿರುವ ಹಗಲು ಹೊತ್ತಿನಲ್ಲಿ ಬಾವಿ ಕಣ್ಣಿಗೆ ಸ್ಪಷ್ಟವಾಗಿ ಕಾಣಿಸುತ್ತಿದ್ದರೂ ಸಹ ಹೋಗಿ ಅದಕ್ಕೆ ಬೀಳುವುದು ಪರಮ ಮೂರ್ಖತನವಾಗಿದೆ. ಕೇವಲ ಬಾವಿ ಮತ್ತು ಕತ್ತಲೆಯ ವಿಷಯಕ್ಕೆ ಗಾದೆಯು ಸೀಮಿತವಾಗಿಲ್ಲ. ಇದು ಮಾನವನ ದೈನಂದಿನ ಜೀವನದ ನಡೆವಳಿಕೆ, ನಿರ್ಧಾರಗಳು ಮತ್ತು ಸಾಮಾಜಿಕ ವರ್ತನೆಗೆ ನೇರವಾಗಿ ಅನ್ವಯಿಸುತ್ತದೆ. ಮನುಷ್ಯನಿಗೆ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂದು ಯೋಚಿಸುವ ವಿವೇಚನಾ ಶಕ್ತಿ ಇದೆ. ಆದರೂ ಸಹ, ಅನೇಕ ಬಾರಿ ಮನುಷ್ಯರು ತಮಗೆ ನಷ್ಟ ಅಥವಾ ಸಂಕಷ್ಟ ಎದುರಾಗುತ್ತದೆ ಎಂದು ಮೊದಲೇ ಗೊತ್ತಿದ್ದರೂ ದುರಾಸೆ, ಅಹಂಕಾರ ಅಥವಾ ಬೇಜವಾಬ್ದಾರಿತನದಿಂದ ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ದುಶ್ಚಟಗಳ ದಾಸರಾಗುವುದು, ಸಾಲದ ಸುಳಿ ಮತ್ತು ಆನ್‌ಲೈನ್ ವಂಚನೆ, ದುಷ್ಟರ ಸಹವಾಸ ಇದಕ್ಕೆ ಉತ್ತಮ ಉದಾಹರಣೆಗಳು. "ಅನುಭವವೇ ಎಲ್ಲಕ್ಕಿಂತ ದೊಡ್ಡ ಗುರು" ಎನ್ನುವಂತೆ ಒಮ್ಮೆ ಮಾಡಿದ ತಪ್ಪಿನಿಂದ ಮನುಷ್ಯ ಪಾಠ ಕಲಿಯಬೇಕು. ಬುದ್ಧಿ ಮತ್ತು ವಿವೇಕವನ್ನು ಬಳಸಿ, ಅಪಾಯದ ಹಾದಿಯಿಂದ ದೂರವಿದ್ದು ನೆಮ್ಮದಿಯ ಜೀವನ ನಡೆಸಬೇಕು ಎಂಬುದು ಈ ಗಾದೆಯ ತಾತ್ಪರ್ಯವಾಗಿದೆ

IX. ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು : **6 X 3 = 18**

33. "ಹುಲಿ ಈಗ ಎಷ್ಟು ಹಸಿದಿರಬೇಕು."

ಉತ್ತರ :

ಆಯ್ಕೆ : ಪ್ರಸ್ತುತ ವಾಕ್ಯವನ್ನು ಎ. ಎನ್. ಮೂರ್ತಿರಾವ್ ಅವರು ಬರೆದ 'ಸಮಗ್ರ ಲಲಿತ ಪ್ರಬಂಧಗಳು' ಎಂಬ ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಶಾನುಭೋಗರು 'ಕುಡಿದ ನೀರು ಅಲುಗದ ಹಾಗೆ' ಎನ್ನಲಾಗದಿದ್ದರೂ ಹುಲಿಯಿಂದ ತಪ್ಪಿಸಿಕೊಂಡು ಜೀವ ಸಹಿತ ಮನೆ ಸೇರಿಕೊಂಡರು. ನಂತರ ರಸದೂಟವನ್ನು ಮಾಡುವ ಸಂದರ್ಭದಲ್ಲಿ ಶಾನುಭೋಗರು ಅನಂತ ವಾತ್ಸಲ್ಯದಿಂದ ಖರ್ದಿ ಪುಸ್ತಕವನ್ನು ನೋಡುತ್ತಾ, ಹುಲಿಯ ಬಗ್ಗೆ ಯೋಚನೆ ಮೂಡಿ ಅವರ ವದನಾರವಿಂದದಲ್ಲಿ ಮುಗುಳುನಗೆ ಮೂಡಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ : ನಾನು ಹುಲಿಯಿಂದ ತಪ್ಪಿಸಿಕೊಂಡು ಬಂದು ರಸದೂಟವನ್ನು ಮಾಡುತ್ತಿದ್ದೇನೆ. ಆದರೆ ತನ್ನ ಧರ್ಮಶ್ರದ್ಧೆಯಿಂದ ನನ್ನನ್ನು ಬಿಟ್ಟ ಆ ಹುಲಿ ಹಸಿವಿನಿಂದ ಬಳಲುತ್ತಿರಬಹುದು ಎಂಬ ಶಾನುಭೋಗರ ಮಾನವೀಯ ಗುಣ ಸ್ವಾರಸ್ಯಪೂರ್ಣವಾಗಿದೆ.

34. "ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು."

ಉತ್ತರ :

ಆಯ್ಕೆ : ಪ್ರಸ್ತುತ ವಾಕ್ಯವನ್ನು ದೇವನೂರ ಮಹಾದೇವ ಅವರು ಬರೆದ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲೇಖಕರಾದ ದೇವನೂರ ಮಹಾದೇವ ಅವರು ವಚನಕಾರರು ನಮ್ಮ ಸುತ್ತಮುತ್ತ ಇರುವ ದೇವರುಗಳನ್ನು ದೇವರು ಅಂದುಕೊಂಡಿರಲಿಲ್ಲ. ಪ್ರತಿಯೊಬ್ಬ ವಚನಕಾರರಿಗೂ ಅವರವರದೇ ಇಷ್ಟದೈವ. ಅಂದರೆ ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ : ಹನ್ನೆರಡನೆಯ ಶತಮಾನದ ವಚನಕಾರರು ನುಡಿದಂತೆ ನಡೆದು ದೈವವನ್ನು ಕಂಡುಕೊಂಡವರು, ಇಷ್ಟದೈವದಂತೆ ಇದ್ದ ಪ್ರಜ್ಞೆ ಪ್ರತಿಯೊಬ್ಬರಲ್ಲಿ ಜಾಗೃತವಾಗಿರಬೇಕು ಎಂಬುದು ಲೇಖಕರ ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ಮೂಡಿಬಂದಿದೆ.

35. "ಹೇಗೋ ಸೊಸೆಯನ್ನು ಬದುಕಿಸಿದೆ."

ಉತ್ತರ :

ಆಯ್ಕೆ : ಪ್ರಸ್ತುತ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ಬರೆದ 'ಚಪ್ಪಲಿಗಳು' ಕೃತಿಯಿಂದ ಆಯ್ದ 'ಯುದ್ಧ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ವಿಮಾನ ದಾಳಿಯಿಂದಾಗಿ ಗಾಯಗೊಂಡ ಸೇನಾವೈದ್ಯ ರಾಹಿಲ ಕತ್ತಲೆಯಲ್ಲಿ ತೆವಳುತ್ತ ಮುದುಕಿಯ ಮನೆಗೆ ಸೇರಿ, ಆಕೆಯ ಸೊಸೆಗೆ ಹೆರಿಗೆ ಮಾಡಿಸಿ ಸೊಸೆಯ ಪ್ರಾಣ ಉಳಿಸುತ್ತಾನೆ. ಕೋಣೆಯಿಂದ ಹೊರಬಂದು, ಮುದುಕಿಗೆ "ನಾನು ಬರುವುದು ಕೊಂಚ ತಡವಾಗಿದ್ದರೂ ನಿಮ್ಮ ಸೊಸೆಯೂ ಉಳಿಯುತ್ತಿರಲಿಲ್ಲ" ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ವೈರಿ ದೇಶದವನಾದರೂ ತನ್ನ ಕಾಲಿನ ಗಾಯದ ನೋವನ್ನು ಲೆಕ್ಕಿಸದೆ ಗರ್ಭಿಣಿ ಹೆಂಗಸೊಬ್ಬಳ ಜೀವ ಉಳಿಸಲು ಪ್ರಯತ್ನಿಸುವ ರಾಹಿಲನ ಮಾನವೀಯತೆ, ವೈದ್ಯ ವೃತ್ತಿ ಧರ್ಮ, ಉದಾತ್ತ ಗುಣ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ.

01-K

36. "ತಿಂಗಳಿನೂರಿನ ನೀರನು ಹೀರಿ"

ಉತ್ತರ :

ಆಯ್ಕೆ : ಪ್ರಸ್ತುತ ಸಾಲನ್ನು ದ. ರಾ. ಬೇಂದ್ರೆಯವರು ಬರೆದ 'ಗರಿ' ಕೃತಿಯಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕವಿ ಬೇಂದ್ರೆ ಅವರು ಕಾಲದ ಚಲನೆಯನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ಬಹಳ ಮನೋಜ್ಞವಾಗಿ 'ಹಕ್ಕಿ ಹಾರುತಿದೆ ನೋಡಿದಿರಾ' ಪದ್ಯವನ್ನು ರಚಿಸಿದ್ದಾರೆ. ನಿರಂತರವಾಗಿ ಚಲಿಸುತ್ತಿರುವ ಕಾಲವೆಂಬ ಹಕ್ಕಿಯು ಶುಕ್ರ ಗ್ರಹವೆಂಬ ಬೆಳ್ಳಿಯ ಹಳ್ಳಿಯ ಮೇರೆಯನ್ನು ಮೀರಿ ಹಾರುತಿದೆ ಚಂದ್ರಲೋಕದ ಅಂಗಳಕ್ಕೂ ಹಾರಿದ್ದಲ್ಲವೇ ಮಂಗಳನ ಅಂಗಳಕ್ಕೆ ಕಾಲಿಟ್ಟು ತಾನು ಹಾಡಲು ಹಾರಾಡಲು ಹೊರಟಿದೆ ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಮಾನವನ ವೈಜ್ಞಾನಿಕ ಕ್ರಾಂತಿಯ ಬೆಳೆವಣಿಗೆಗಳು ಹಾಗೂ ಶುಕ್ರ, ಚಂದ್ರ, ಮಂಗಳ ಗ್ರಹಗಳಿಗೆ ಮಾನವ ಹೋಗಬಹುದಾದ ಸಾಧ್ಯತೆಗಳು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

37. "ಹಸುರ್ಗಟ್ಟಿತೊ ಕವಿಯಾತ್ಮಂ"

ಉತ್ತರ :

ಆಯ್ಕೆ : ಪ್ರಸ್ತುತ ಸಾಲನ್ನು ಕುವೆಂಪುರವರು ಬರೆದ 'ಪಕ್ಷಿಕಾಶಿ' ಕೃತಿಯಿಂದ ಆಯ್ದ 'ಹಸುರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ನವರಾತ್ರಿಯ, ನವಧಾತ್ರಿಯ ಈ ಶ್ಯಾಮಲ ವರ್ಣದ ಕಡಲು, ಹೂವಿನ ಕಂಪು, ತಂಗಾಳಿಯ ತಂಪು, ಹಕ್ಕಿಯ ಇಂಪಾದ ಗಾನ, ಎತ್ತೆತ್ತ ನೋಡಿದರೂ ಹಸುರು.. ಹಸುರು.. ಹಸುರು.. ಅತ್ತ–ಇತ್ತ–ಎತ್ತಲೂ ಹಸುರೇ ಆವರಿಸಿರುವುದನ್ನು ಕಂಡ ಕವಿಯಾತ್ಮವು ಹಸುರುಗಟ್ಟಿದ್ದಲ್ಲದೆ ಅವರ ದೇಹದಲ್ಲಿನ ರಕ್ತವೂ ಹಸುರಾಯಿತು ಎಂದು ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಕವಿ ಕುವೆಂಪುರವರು ಹೇಳಿದ್ದಾರೆ.

ಸ್ವಾರಸ್ಯ : ಹಸುರು ಕೇವಲ ಸಸ್ಯವರ್ಗಕ್ಕೆ ಮಾತ್ರ ಸೀಮಿತವಲ್ಲ ಇಡೀ ಪ್ರಕೃತಿಯ ಚೈತನ್ಯಕ್ಕೆ ಕಾರಣವಾಗಿದೆ. ಪ್ರಕೃತಿಗಷ್ಟೇ ಅಲ್ಲದೆ ಕವಿಯ ದೇಹದ ರಕ್ತಕ್ಕೂ ಹಸುರು ವ್ಯಾಪಿಸಿದೆ ಎಂಬ ಕವಿಯವಾಣಿಯಿಂದ ಹಸುರಿನ ಸೌಂದರ್ಯ ಮತ್ತು ಹಸುರಿನ ಮಹತ್ತ್ವ ಸ್ವಾರಸ್ಯ ಪೂರ್ಣವಾಗಿ ಮೂಡಿ ಬಂದಿದೆ.

38. "ನೂಂಕಂತಪ್ಪನನಱೆಯೆನೆಂದು ಸಭೆಯೊಳ್ ನುಡಿದಂ"

ಉತ್ತರ :

ಆಯ್ಕೆ : ಪ್ರಸ್ತುತ ಸಾಲನ್ನು ಪಂಪನು ಬರೆದ 'ವಿಕ್ರಮಾರ್ಜುನ ವಿಜಯಂ' ಕೃತಿಯಿಂದ ಆಯ್ದ 'ಕೆಮ್ಮನೆ ಮೀಸೆವೊತ್ತೆನೇ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂಧರ್ಭ : ದ್ರೋಣನು ಸಹಾಯವನ್ನು ನಿರೀಕ್ಷಿಸಿ ಬಾಲ್ಯದ ಸ್ನೇಹಿತ ದ್ರುಪದನ ಅರಮನೆಯ ಬಾಗಿಲಿಗೆ ಬಂದು ದ್ವಾರಪಾಲಕನನ್ನು ಕರೆದು "ನಿಮ್ಮ ಜೊತೆಯಲ್ಲಿ ಆಟವಾಡಿದ ಸ್ನೇಹಿತನಾದ ದ್ರೋಣನೆಂಬ ಬ್ರಾಹ್ಮಣನು ಬಂದಿದ್ದಾನೆಂದು ನಿಮ್ಮ ರಾಜನಿಗೆ ತಿಳಿಸು" ಎಂದಾಗ ಅವನು ಹಾಗೆಯೇ ತಿಳಿಸಿದಾಗ ದ್ರುಪದನು "ದ್ರೋಣನೆಂಬ ಬ್ರಾಹ್ಮಣನೇ? ಹೇಗೆ ನನಗೆ ಸ್ನೇಹಿತನಾಗಲು ಸಾಧ್ಯ? ಇದು ಭ್ರಮೆಯಲ್ಲವೇ? ಅಂತಹವನನ್ನು ನಾನು ತಿಳಿದಿಲ್ಲ; ಅವನನ್ನು ಹೊರಕ್ಕೆ ತಳ್ಳು" ಎಂದು ಸಭಾಮಧ್ಯದಲ್ಲಿ ಅಹಂಕಾರದಿಂದ ಈ ಮೇಲಿನ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ತಿರಸ್ಕಾರದ ಉದಾಸೀನ, ಗರ್ವ, ಸ್ನೇಹಿತನಲ್ಲಿ ಅನಾದರ ಭಾವ, ಅಸಹನೆ ಸ್ವಪ್ರತಿಷ್ಠೆ ಹಾಗೂ ದ್ರುಪದನ ಗರ್ವದ ಪರಾಕಾಷ್ಠೆ ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

X. ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ) : 1 X 4 = 4

39. ಕೊರಳ ಸೆರೆ ಹಿಗ್ಗಿದವು ದೃಗುಜಲ

.....

.....

.....

.....

ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

ಅಥವಾ

[Turn over

01-K

ಮಾರಿಗೌತಣವಾಯ್ತು ನಾಳಿನ

.....

.....

.....

.....

ವೀರರೈವರ ನೋಯಿಸೆನು ರಾಜೀವಸಖನಾಣೆ

ಉತ್ತರ : ಕೊರಳ ಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡು ನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ
ಹರಿಯ ಹಗೆ ಹೊಗೆದೋರದುರುಹದೆ
ಬರಿದೆ ಹೋಹುದೆ ತನ್ನ ವಂಶವ
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

ಅಥವಾ

ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ

XI. ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು : 1 X 4 = 4

40. ಬಲ್ಗಯ್ಯ ನೃಪರಂಜಿ ತಡೆಯದೆ ರಘೂದ್ವಹನ
ಸೊಲ್ಗೇಳಿ ನಮಿಸಲಿಳೆಯೊಳ್ ಚರಿಸುತದ್ವರದ
ನಲ್ಗುದುರೆ ಬಂದು ವಾಲ್ಮೀಕಿಯ ನಿಜಾಶ್ರಮದ ವಿನಿಯೋಗದುಪವನದೊಳು
ಪುಲ್ಗಳ ಪಸುರ್ಗೆಳಸಿ ಪೊಕ್ಕೊಡಾ ತೋಟಗಾ
ವಲ್ಗೆ ತನ್ನೊಡನಾಡಿಗಳ ಕೂಡಿ ಲೀಲೆ ಮಿಗೆ
ಬಿಲ್ಗೊಂಡು ನಡೆತಂದವಂ ಕಂಡನರ್ಚಿತ ಸುವಾಜಿಯಂ ವೀರಲವನು

ಉತ್ತರ : ರಾಮಾಯಣ ಮಹಾಕಾವ್ಯದಲ್ಲಿ ಬರುವ ಕುಶಲವರ ಕತೆ ಸರಳವೂ ಸುಂದರವೂ ಆಗಿದೆ. ಶ್ರೀರಾಮನು ಕೈಗೊಂಡ ಅಶ್ವಮೇಧಯಾಗದ ಕುದುರೆಯನ್ನು ತನ್ನ ತಂದೆ ಶ್ರೀರಾಮನದು ಎಂದು ತಿಳಿಯದ ಲವನು ಬಾಲ ಸಹಜ ಕುತೂಹಲದಿಂದ ಕಟ್ಟುತ್ತಾನೆ. ಆ ಸಂದರ್ಭದ ಕಾವ್ಯದ ಸೊಬಗನ್ನು ಪರಿಚಯಿಸುವುದು ಕವಿ ಲಕ್ಷ್ಮೀಶನು ಬರೆದ 'ವೀರಲವ' ಪದ್ಯದ ಆಶಯವಾಗಿದೆ.

ಸೀತೆಯ ಅಗಲುವಿಕೆಯಿಂದ ಶ್ರೀರಾಮನು ಮಾನಸಿಕವಾಗಿ ದುಃಖಿಕ್ಕೀಡಾಗುತ್ತಾನೆ. ರಾವಣನ ವಧೆಯಿಂದ ಬ್ರಹ್ಮಹತ್ಯಾದೋಷ ಬಂದಿರುವುದನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಮಹರ್ಷಿಗಳ ಆದೇಶದಂತೆ ರಾಮ ಅಶ್ವಮೇಧವನ್ನು ಕೈಗೊಳ್ಳುತ್ತಾನೆ. ಸಂಚಾರಕ್ಕೆ ತೆರಳಿದ ಕುದುರೆಯ ಬೆಂಗಾವಲಿಗೆ ಶತ್ರುಘ್ನನನ್ನು ಕಳುಹಿಸುತ್ತಾನೆ. ರಾಮನ ಯಾಗದ ಕುದುರೆಯೆಂದು ಕೇಳಿ, ಭುಜಬಲ ಪರಾಕ್ರಮಿಗಳಾದ ರಾಜರು ಹೆದರಿ, ತಡೆಯದೆ, ನಮಸ್ಕರಿಸಿ ಕುದುರೆಯನ್ನು ಮುಂದೆ ಕಳುಹಿಸುತ್ತಾರೆ. ಹೀಗೆ ಭೂಮಿಯಲ್ಲಿ ಸಂಚರಿಸುತ್ತ ಯಜ್ಞದ ಉತ್ತಮವಾದ ಕುದುರೆ ವಾಲ್ಮೀಕಿಯ ನಿಜಾಶ್ರಮದ ಬಳಿಗೆ ಬರುತ್ತದೆ. ವಾಲ್ಮೀಕಿಯ ನಿಜಾಶ್ರಮದ ಉಪಯೋಗದ ತೋಟದಲ್ಲಿ ಚೆನ್ನಾಗಿ ಬೆಳೆದು ನಿಂತ ಹುಲ್ಲುಗಳ ಹಸುರಿಗೆ ಬಯಸಿ, ಕುದುರೆಯು ಆಶ್ರಮದ ತೋಟವನ್ನು ಹೊಕ್ಕಾಗ, ವೀರಲವನು ಆ ತೋಟದ ಕಾವಲಿಗೆ ತನ್ನ ಜೊತೆಗಾರರೊಂದಿಗೆ ಆನಂದದಿಂದ ಆಟವಾಡುತ್ತಿರುತ್ತಾನೆ. ಧನುರ್ಧಾರಿಯಾದ ಲವನು ಉಪವನದದಲ್ಲಿ ಇರುವ ಪೂಜಿಸಲ್ಪಟ್ಟ ಸುಂದರವಾದ ಕುದುರೆಯನ್ನು ಕಾಣುತ್ತಾನೆ.

ಶ್ರೀರಾಮನ ಹೆಸರಿಗಿದ್ದ ಶಕ್ತಿ, ರಾಮನ ಬಗೆಗೆ ಇತರ ರಾಜರುಗಳಿಗಿದ್ದ ಗೌರವ ಅಭಿಮಾನ, ಶ್ರೀರಾಮನ ಯಾಗ ವಿಘ್ನಗಳಿಲ್ಲದೆ ನಡೆಯಲಿ ಎಂಬ ಭಾವ, ವಾಲ್ಮೀಕಿ ಮುನಿಯ ಆಶ್ರಮದ ಸುಂದರ ಚಿತ್ರಣ, ತನ್ನ ಜವಾಬ್ದಾರಿಯನ್ನು ನಿರ್ವಹಿಸುವ ಲವನ ಗುಣ ಹಾಗೂ ಶ್ರೀರಾಮನ ಪರಾಕ್ರಮದ ಶ್ರೇಷ್ಠತೆ ಪ್ರಸ್ತುತ ಪದ್ಯಭಾಗದಲ್ಲಿ ಅಡಕವಾಗಿರುವ ಮೌಲ್ಯಗಳಾಗಿವೆ.

01-K

XII. ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು : **2 X 4 = 8**

41. ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ವರ್ಣಿತವಾಗಿರುವ ಬಗೆಯನ್ನು ವಿವರಿಸಿ.

ಅಥವಾ

ಹೂವು ಹಣ್ಣುಗಳನ್ನು ವಿಂಗಡಿಸುತ್ತ ಶ್ರೀರಾಮನಿಗಾಗಿ ಶಬರಿಯು ಹಂಬಲಿಸಿದ ಪರಿಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಉತ್ತರ : ತನಗಾಗಿ ಹಂಬಲಿಸುತ್ತಿರುವ ಶಬರಿಯನ್ನು ಕಣ್ಣಾರೆ ಕಂಡ ರಾಮ ಹೆಚ್ಚು ಕಾಯಿಸದೆ ಶಬರಿ ಆಶ್ರಮದ ಬಾಗಿಲಿಗೆ ಬಂದು ತಾಯಿ ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ ಎಂದು ಕೇಳಿದಾಗ ರಾಮನೇ ತನ್ನ ಮುಂದೆ ಬಂದು ನಿಂತಿರುವುದನ್ನು ನೋಡಿ ಶಬರಿ ಆಶ್ಚರ್ಯಪಟ್ಟಳು. ರಾಮನ ಹತ್ತಿರ ಬಂದು ಅವನನ್ನು ಮುಟ್ಟಿ, ಪಾದಕ್ಕೆ ನಮಸ್ಕರಿಸಿ, ಕೈಯನ್ನು ಕಣ್ಣಿಗೆ ಒತ್ತಿಕೊಂಡು ಕಣ್ಣೀರು ಸುರಿಸಿದಳು. ಗದ್ಗದ ಸ್ವರದಿಂದ ಬನ್ನಿರಿ ಎಂದು ಆಹ್ವಾನಿಸಿದಳು. ಸಿದ್ಧತೆಯೇ ಇಲ್ಲವಲ್ಲ ಎಂದು ಹಂಬಲಿಸಿದಳು. ಮನಸ್ಸಿನ ಬಯಕೆಯಂತೆ ಬಗೆಬಗೆಯ ಕಂಪು ಇರುವ ವನಮಾಲೆಯನ್ನು ರಾಮನ ಕೊರಳಿಗೆ ಇಟ್ಟು ಹಿಗ್ಗಿದಳು. ಜಗತ್ತಿನಲ್ಲಿ ಇಂತಹ ರುಚಿಕರವಾದ ಹಣ್ಣೇ ಇಲ್ಲವೆಂದು ಹೇಳುತ್ತ, ನಿಮಗಾಗಿ ತಂದಿದ್ದೇನೆಂದು ತಿಳಿಸಿ ರಾಮನ ಕೈಗೆ ಇತ್ತಳು. ಶಬರಿಯ ಸೇವೆಯಿಂದ ರಾಮನು ಸುಪ್ರಸನ್ನನಾದನು. ರಾಮಲಕ್ಷ್ಮಣರು ಧನ್ಯತಾಭಾವದಿಂದ ಮಂದಹಾಸ ಬೀರಿದರು. ಹೀಗೆ ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ವರ್ಣಿತವಾಗಿದೆ.

ಅಥವಾ

ಉತ್ತರ : ಮತಂಗ ಋಷಿಯ ಆಶ್ರಮದಲ್ಲಿದ್ದ ಶಬರಿ ಶ್ರೀರಾಮನ ಗುಣ ಸ್ವಭಾವದ ಸೆಳೆತಕ್ಕೆ ಸಿಲುಕಿ ಆತನನ್ನು ಕಾಣುವುದೇ ಜೀವನದ ಪರಮ ಗುರಿ ಎಂದು ಭಾವಿಸಿದ್ದಳು. ಮತಂಗರು ದಿವ್ಯ ಲೋಕವನ್ನು ತ್ಯಜಿಸಿದ ಬಳಿಕ ರಾಮಧ್ಯಾನದಲ್ಲಿ ನಿರತಳಾಗಿ, ರಾಮನಿಗಾಗಿ ಹಗಲಿರುಳು ಕಾಯುತ್ತಿದ್ದಳು. ಪ್ರತಿದಿನ ಕಾಡಿಗೆ ಹೋಗಿ ಹೂವು ತಳಿರು ಹಣ್ಣು ಹಂಪಲುಗಳನ್ನು ಸಂಗ್ರಹಿಸಿ ತಂದು ರಾಮನಿಗಾಗಿ ಹಂಬಲಿಸುತ್ತಿದ್ದಳು. ಬಾಡಿ ಹೋದ ಹೂವು ಹಣ್ಣುಗಳನ್ನು ಕುರಿತು, ನಿನ್ನೆ ರಾಮನಿಗಾಗಿಯೇ ಎಂದು ಆರಿಸಿ ತಂದ, ಈಗ ಬಾಡಿ ಹೋಗಿರುವ ಹೂ ಹಣ್ಣು ತಳಿರುಗಳನ್ನು ವಿಂಗಡಿಸುತ್ತ ಅವುಗಳ ಜಾಗದಲ್ಲಿ ಹೊಸದನ್ನು ಇಡುತ್ತ ಅವುಗಳನ್ನು ಉದ್ದೇಶಿಸಿ "ನಿನ್ನೆ ತಾಜಾತನದಿಂದ ಕೂಡಿ ಬಹು ಸುಂದರವಾಗಿದ್ದು, ದುಂಬಿಗಳ ಹೊಗಳಿಕೆಗೆ ಆಸರೆಯಾಗಿದ್ದ ಹೂವುಗಳೇ ರಾಮನನ್ನು ಸ್ಪರ್ಶಿಸುವ ಅದೃಷ್ಟ ಇಲ್ಲದೆ ಕೇವಲ ಗಾಳಿಗೆ ಬಾಡಿ ಹೋಗಿರುವಿರಿ. ರಾಮನಿಗೆ ಆಹಾರವಾಗಬೇಕೆಂದು ಮೀಸಲಾಗಿರಿಸಿದ ವನ್ಯ ಫಲಗಳೇ ಇಂದು ನೀವು ಹುಳುಗಳಿಗೆ ಆಸರೆಯಾಗಿರುವಿರಿ. ಆದರೂ ನಾನು ಧೃತಿಗೆಡದೆ ಹೊಸ ಹೂವು ಹೊಸ ಹಣ್ಣುಗಳಿಂದ ರಾಮನ ಬರುವಿಕೆಗಾಗಿ ಸಿದ್ಧಗೊಳಿಸುತ್ತಲೇ ಇರುತ್ತೇನೆ ಎಂದು ಮಾಲೆಯನ್ನು ಕಟ್ಟುತ್ತಾ ಹಾಡಿಕೊಳ್ಳುತ್ತಾಳೆ. ಮುಂದುವರೆದು ದಶರಥ ಪುತ್ರ ಸಾಧು ಜನರ ಮಿತ್ರ, ಧೀರ, ಶೂರ, ಗಂಭೀರ ಸದ್ಗುಣಗಳ ಸಾರನಾದ ರಾಮನನ್ನು ನಾನೆಂದು ಕಾಣುತ್ತೇನೆ. ಬಿಲ್ಲು ಹಿಡಿದು ಬರುವ ರಾಮ ಅಂಜಿಸುವವರನ್ನು ಅಂಜಿಸುತ್ತಾನೆ. ಹಸುಳೆಯಂತಿರುವ ಸೌಮ್ಯ ಸ್ವಭಾವದ ರಾಮನನ್ನು ನಾನು ಎಂದು ನೋಡಲಿ. ರಾಜತ್ವವನ್ನು ತ್ಯಜಿಸಿ ತಪಸ್ವಿತನವನ್ನು ಸ್ವೀಕರಿಸಿ ತಮ್ಮನೊಂದಿಗೆ ಕಾಡಿಗೆ ಬಂದ ರಾಮನಿಗೆ ಭಯವೇ ಇಲ್ಲ. ಸುಪ್ರಭಾತದಂತಿರುವ ಗುರುಸಿದ್ಧರೆ ಮೆಚ್ಚಿದ ಸನ್ಮಂಗಳ ಮೂರ್ತಿಯಾದ ರಾಮನನ್ನು ನಾನೆಂದು ನೋಡಲಿ, ಎಂದು ದರ್ಶನ ಪಡೆಯಲಿ ಎಂದು ಕಟ್ಟಿದ ಹೂ ಮಾಲೆಗೆ ಮುತ್ತಿಕ್ಕುತ್ತ ಹಾಡಿಕೊಳ್ಳುವಳು. ಹೀಗೆ ಶಬರಿ ರಾಮನ ಬರುವಿಕೆಗಾಗಿ ಹಂಬಲಿಸಿದಳು.

42. ಸಂಕಲ್ಪ ಮತ್ತು ಅನುಷ್ಠಾನ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.

ಅಥವಾ

ಜೀವನದಲ್ಲಿರಬೇಕಾದ ಧನಾತ್ಮಕ ಭಾವನೆ ಹಾಗೂ ದೃಢಸಂಕಲ್ಪದ ಮಹತ್ತ್ವವನ್ನು ಜಿ. ಎಸ್. ಶಿವರುದ್ರಪ್ಪನವರು 'ಸಂಕಲ್ಪಗೀತೆ' ಕವನದಲ್ಲಿ ಹೇಗೆ ವ್ಯಕ್ತಪಡಿಸಿದ್ದಾರೆ?

ಉತ್ತರ : ನಾವು ಜೀವನದಲ್ಲಿ ಪ್ರೀತಿಯ ದೀಪವನ್ನು ಹಚ್ಚುವ ಸಂಕಲ್ಪ ಕೈಗೊಳ್ಳುವುದರಿಂದ ದ್ವೇಷರಹಿತ ಸಮಾಜ ನಿರ್ಮಾಣ ಮಾಡಬಹುದು. ನಾವು ಬದುಕಿನಲ್ಲಿ ಎಚ್ಚರಿಕೆಯಿಂದ ಮುನ್ನಡೆಯುವ ಸಂಕಲ್ಪ ಕೈಗೊಳ್ಳುವುದರಿಂದ ಎಂತಹ ಸವಾಲುಗಳನ್ನು ಧೈರ್ಯವಾಗಿ ಎದುರಿಸಬಹುದು. ನಾವು ಮುಂಗಾರಿನ ಮಳೆಯಂತೆ ಪರಿಸರ ಸಂರಕ್ಷಿಸುವ ಸಂಕಲ್ಪ ಕೈಗೊಳ್ಳುವುದರಿಂದ ನದೀಜಲಗಳನ್ನು ಶುದ್ಧವಾಗಿ ಇಟ್ಟುಕೊಳ್ಳಬಹುದು. ನಾವು ವನಸಂರಕ್ಷಣೆಯ ಸಂಕಲ್ಪ ಕೈಗೊಳ್ಳುವುದರಿಂದ ಕಾಡುಗಳು ಹಚ್ಚಹಸುರಿನಿಂದ ಸಮೃದ್ಧವಾಗುವಂತೆ ಮಾಡಬಹುದು. ನಾವು ಹೊಸ ಭರವಸೆಯನ್ನು ಮೂಡಿಸುವ ಸಂಕಲ್ಪ ಕೈಗೊಳ್ಳುವುದರಿಂದ ಸಮಾಜದ ನೈತಿಕ ಅಧಃಪತನವನ್ನು ತಡೆಯಬಹುದು. ನಾವು ಸಮಾನತೆ ಮನೋಭಾವನೆಯುಳ್ಳವರಾಗುವ ಸಂಕಲ್ಪ ಕೈಗೊಳ್ಳುವುದರಿಂದ ಮನುಜ ಮನುಜರ ನಡುವಿನ ಅಸಮಾನತೆಯ ಅಡ್ಡಗೋಡೆಗಳನ್ನು ಕೆಡುಹಬಹುದು. ಎಲ್ಲ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ ಸಂಕಲ್ಪ ಕೈಗೊಳ್ಳುವುದರಿಂದ ದೇಶದಲ್ಲಿ ಶಾಂತಿಯು ನೆಲೆಸುವಂತೆ ಮಾಡಬಹುದು. ಭಯ ಹಾಗೂ ಸಂಶಯಗಳಿಂದ ಮುಕ್ತರಾಗುವ ಸಂಕಲ್ಪ ಕೈಗೊಳ್ಳುವುದರಿಂದ ಭವಿಷ್ಯದ ಹೊಂಗನಸನ್ನು ಕಾಣಬಹುದು. ಹೀಗೆ ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪನವರು ಸಂಕಲ್ಪ ಮತ್ತು ಅನುಷ್ಠಾನವನ್ನು ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

[Turn over

01-K

ಅಥವಾ

ಉತ್ತರ : "ನಮ್ಮ ಸುತ್ತಲೂ ಹಬ್ಬಿರುವ ದ್ವೇಷದ ಕತ್ತಲೆಯನ್ನು ಕಳೆಯಲು, ಪ್ರೀತಿಯ ದೀಪವನ್ನು ಹಚ್ಚುವ, ಸಂಸಾರ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ದಾಡುತ್ತಿರುವ ಬದುಕೆಂಬ ಹಡಗನ್ನು ಎಚ್ಚರದಲ್ಲಿ ಮುನ್ನಡೆಸುವ, ಪರಿಸರ ಮಾಲಿನ್ಯದಿಂದ ಕಲುಷಿತವಾಗಿರುವ ನದೀಜಲಗಳಿಗೆ ಶುದ್ಧೀಕರಿಸುವ ಮುಂಗಾರಿನ ಮಳೆಯಂತಹ ಪರಿಸರ ಪ್ರೇಮಿಯಾಗುವ, ಬರಡಾಗಿರುವ ಕಾಡುಮೇಡುಗಳು ಹಚ್ಚಹಸಿರಿನಿಂದ ಕಂಗೊಳಿಸಿ, ಸಮೃದ್ಧವಾಗುವಂತಹ ವಸಂತಕಾಲವಾಗುವ, ಅತ್ಯಾಚಾರ, ಅನಾಚಾರ, ಭ್ರಷ್ಟಾಚಾರ, ಅಸ್ಪೃಶ್ಯತೆ, ಅಸಮಾನತೆಗಳಿಂದ ಅಧಃಪತನಗೊಂಡಿರುವ ಸಮಾಜವನ್ನು ಹೊಸ ಭರವಸೆಗಳ ಮೂಲಕ ಮೇಲೆತ್ತುವ, ಭಾಷೆ, ಜಾತಿ, ಮತ, ಧರ್ಮಗಳ ಭೇದಭಾವದಿಂದ ಮನುಜ ಮನುಜರ ನಡುವೆ ಉಂಟಾಗಿರುವ ಅಸಮಾನತೆಯ ಅಡ್ಡಗೋಡೆಗಳನ್ನು ಕೆಡವಿ. ಸಮಾನತೆಯ ಮನೋಭಾವನೆಯನ್ನು ಮೂಡಿಸುವ ಸೇತುವೆಯಾಗುವ, ಎಲ್ಲ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ, ಭಯ ಹಾಗೂ ಸಂಶಯಗಳಿಂದ ಮಸುಕಾದ ಕಣ್ಣುಗಳಲ್ಲಿ ಭವಿಷ್ಯದ ಹೊಂಗನಸು ಕಾಣುವಂತೆ ಮಾಡುವ ದೃಢಸಂಕಲ್ಪವನ್ನು ಕೈಗೊಳ್ಳಬೇಕು" ಎಂಬುದು ಕವಿ ಜಿ.ಎಸ್. ಶಿವರುದ್ರಪ್ಪ ಅವರ ಆಶಯವಾಗಿದೆ.

XIII. ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರ ಬರೆಯುವುದು(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :

1 X 4 = 4 (2+2)

43. ರಾಷ್ಟ್ರಕೂಟ ದೊರೆ ಅಮೋಘವರ್ಷ ನೃಪತುಂಗನ ರಾಣಿ ಲಕ್ಷ್ಮೀದೇವಿ ಸೇನಾಧ್ಯಕ್ಷ ಬಂಕೇಶರ ಮಗುವಿನ ನಾಮಕರಣಕ್ಕೆ ಹೋಗಿ, ಮಗುವಿನ ಬಾಯಿಗೆ ಕಲ್ಲು ಸಕ್ಕರೆ ಇತ್ತು, ಮಗುವಿನ ಕೈಗೊಂದು ಚಿನ್ನದ ವರಹ ಕೊಟ್ಟು ಅರಮನೆಗೆ ಹಿಂದಿರುಗಿದ್ದಳು. ಹೇಗಾದರೂ ಮಾಡಿ ರಾಜನ ಹೊರೆಯನ್ನು ಹಗುರಗೊಳಿಸಬೇಕು. ಅವರ ಚಿಂತೆ ಕಳೆಯಬೇಕು. ಅಂತಹ ಬಲಿಷ್ಠ ಬಾಹುಗಳು ಬೇಕು. ಮುಂದೆ ಸಿಂಹಾಸನಕ್ಕೆ ದಿಕ್ಕಾಗುವ ಗಂಡು ಕೂಸು ಬೇಕೆಂದು ಕಂಡ ಕಂಡ ದೇವರಿಗೆಲ್ಲ ಕೈ ಮುಗಿದು ಹರಕೆ ಹೊತ್ತಳು. ಇತ್ತ ರಾಜ ನೃಪತುಂಗನಿಗೆ ಕೆಟ್ಟ ಸುದ್ದಿಯೊಂದು ಬರಸಿಡಿಲಂತೆ ಬಡಿಯಿತು. ಇದರಿಂದಾಗಿ ರಾಜನ ನೆಮ್ಮದಿ ಕದಡಿತು. ಗಡಿಯ ಗ್ರಾಮವೊಂದರ ಮೇಲೆ ಚಾಲುಕ್ಯರು ದಾಳಿ ಮಾಡಿದ್ದರು. ಜೈನ ಧರ್ಮಕ್ಕೆ ಒಲಿದಿದ್ದ ರಾಷ್ಟ್ರಕೂಟ ಪ್ರಭುವಿಗೆ ಶಾಂತಿ ಅಹಿಂಸೆಗಳು ಪ್ರಿಯವಾಗಿದ್ದವು. ಯುದ್ಧ ಮಾಡುವ ಮನಸ್ಸಿರಲಿಲ್ಲ. ಮನಸ್ಸು ಇಬ್ಬಗೆಯಾಗಿ ಹೊಯ್ದಾಡಿತು. ಅಂತಿಮವಾಗಿ ತಾವೇ ಕತ್ತಿ ಹಿಡಿದು ಹೋರಾಡಿದರು. ಭೀಕರ ಯುದ್ಧ ನಡೆಯಿತು. ಶತ್ರುಸೇನೆ ಸೋತು ಶರಣಾಯಿತು. ಯುದ್ಧ ಮುಗಿಸಿ ಹಿಂದಿರುಗಿದ ರಾಜನಿಗೆ ಮಹತ್ತರ ಶುಭವಾರ್ತೆಯೊಂದು ಕಾದಿತ್ತು. ಮಹಾರಾಣಿ ಲಕ್ಷ್ಮೀದೇವಿ ಗಂಡು ಮಗುವಿಗೆ ತಾಯಿ ಆಗಿದ್ದಳು. ಎಲ್ಲೆಲ್ಲೂ ಆನಂದ ಸಡಗರ ಮನೆ ಮಾಡಿತ್ತು. ರಾಜಕುಮಾರ ಕೃಷ್ಣನು ದಿನದಿಂದ ದಿನಕ್ಕೆ ಬೆಳೆದು ದೊಡ್ಡವನಾದನು. ತಂದೆಯೊಂದಿಗೆ ಸದಾ ಕಿರಿಕಿರಿಯ ಮಾತು. ಉಳಿಗದವರೊಂದಿಗೆ ಉದ್ಧಟತನದ ವರ್ತನೆ. ಹಿರಿಯರು ಕಿರಿಯರು ಎಂದು ನೋಡದೆ ಅಗೌರವ ತೋರುತ್ತಿದ್ದನು. ರಾಜ್ಯದ ಸರ್ವಸ್ವವೂ ತನ್ನ ಕಾಲಕಸಕ್ಕಿಂತ ಕಡೆ ಎಂಬ ಮನೋಭಾವ ಇತ್ತು. ಇದರಿಂದಾಗಿ ವಿದ್ಯೆ ಕಲಿಸಲು ನಿಯುಕ್ತರಾದ ಚಂದ್ರಪ್ರಭಾಚಾರ್ಯರು ಕೂಡ ದುಃಖಿತರಾಗಿ ಸ್ವಗೃಹದ ದಾರಿ ಹಿಡಿದರು. ಕಾಲ ಮೀರುವ ಮೊದಲೆ ಮಗನನ್ನು ಸರಿದಾರಿಗೆ ತರಬೇಕೆಂದು ನಿರ್ಧರಿಸಿದ ರಾಜ ಅಮೋಘವರ್ಷ ತಮ್ಮ ಜೀವದ ಗೆಳೆಯನಾದ ಸೇನಾಧಿಪತಿ ಬಂಕೇಶನನ್ನು ಕರೆದು ಚರ್ಚಿಸಿದರು. ಇಬ್ಬರು ತಮ್ಮ ತಮ್ಮ ಮಕ್ಕಳನ್ನು ರಾಜಧಾನಿಯಿಂದ ದೂರದ ಜಿನಸೇನಾಚಾರ್ಯರ ಬಸದಿಯಲ್ಲಿ ವಿದ್ಯಾರ್ಜನೆಗಾಗಿ ಬಿಡಲು ನಿಶ್ಚಯಿಸಿದರು. ಅದರಂತೆ ಕೃಷ್ಣ ಹಾಗೂ ಲೋಕಾದಿತ್ಯರು ಆಚಾರ್ಯ ಜಿನಸೇನರಲ್ಲಿ ಶಿಷ್ಯಾವೃತ್ತಿಯನ್ನು ಆರಂಭಿಸಿದರು. ಇದರಿಂದ ರಾಜ ನಿಟ್ಟುಸಿರು ಬಿಟ್ಟನು. ದೇಶ ವಿದೇಶಗಳೊಂದಿಗಿನ ವ್ಯಾಪಾರ ಸಮೃದ್ಧಿಯಾಯಿತು. ಕ್ರಿ. ಶ. ೮೫೧ ರಲ್ಲಿ ಮಾನ್ಯಖೇಟಾಕ್ಕೆ ಬಂದ ಅರಬ್ಬಿ ವರ್ತಕ ಸುಲೇಮಾನನು ರಾಜ ಅಮೋಘವರ್ಷನ ಸದ್ಗುಣ ಹಾಗೂ ಆಡಳಿತ ವ್ಯವಸ್ಥೆಯನ್ನು ಬಹುವಾಗಿ ಪ್ರಶಂಸಿಸಿದನು.

ಪ್ರಶ್ನೆಗಳು :

ಅ. ಕೃಷ್ಣ ಮತ್ತು ಲೋಕಾದಿತ್ಯರು ಆಚಾರ್ಯ ಜಿನಸೇನರಲ್ಲಿ ಶಿಷ್ಯಾವೃತ್ತಿಯನ್ನು ಆರಂಭಿಸಲು ಕಾರಣವೇನು?

ಆ. ರಾಜಕುಮಾರ ಕೃಷ್ಣನ ವರ್ತನೆ ಹೇಗಿತ್ತು?

ಉತ್ತರ :

ಅ. ಗುರುಹಿರಿಯರೊಂದಿಗಿನ ದುರ್ವರ್ತನೆಯನ್ನು ಗಮನಿಸಿದ ರಾಜ ಕಾಲ ಮೀರುವ ಮೊದಲೇ ಮಗನನ್ನು ಸರಿದಾರಿಗೆ ತರಬೇಕೆಂದು ನಿರ್ಧರಿಸಿ ತನ್ನ ಜೀವದ ಗೆಳೆಯನಾದ ಸೇನಾಧಿಪತಿ ಬಂಕೇಶನನ್ನು ಕರೆದು ಚರ್ಚಿಸಿ, ತಮ್ಮ ಇಬ್ಬರೂ ಮಕ್ಕಳನ್ನು ರಾಜಧಾನಿಯಿಂದ ದೂರದಲ್ಲಿರುವ ಜಿನಸೇನಾಚಾರ್ಯರ ಬಸದಿಯಲ್ಲಿ ವಿದ್ಯಾರ್ಜನೆಗಾಗಿ ಬಿಡಲು ನಿಶ್ಚಯಿಸಿದರು. ಇದರಿಂದಾಗಿ ಕೃಷ್ಣ ಮತ್ತು ಲೋಕಾದಿತ್ಯರು ಆಚಾರ್ಯ ಜಿನಸೇನಾಚಾರರರಲ್ಲಿ ಶಿಷ್ಯಾವೃತ್ತಿಯನ್ನು ಆರಂಭಿಸಿದರು.

ಆ. ರಾಜ ಅಮೋಘವರ್ಷನ ಪುತ್ರ ರಾಜಕುಮಾರ ಕೃಷ್ಣನು ದಿನದಿಂದ ದಿನಕ್ಕೆ ಬೆಳೆದು ದೊಡ್ಡವನಾದನು ತಂದೆಯೊಂದಿಗೆ ಸದಾ ಕಿರಿಕಿರಿಯ ಮಾತು. ಉಳಿಗದವರೊಂದಿಗೆ ಉದ್ಧಟತನದ ವರ್ತನೆ. ರಾಜ್ಯದ ಸರ್ವಸ್ವವೂ ತನ್ನ ಕಾಲಕಸಕ್ಕಿಂತ ಕಡೆ ಎಂಬ ಮನೋಭಾವ. ವಿದ್ಯೆ ಕಲಿಸಲು ನಿಯುಕ್ತರಾದ ಚಂದ್ರಪ್ರಭಾಚಾರ್ಯರು ಕೂಡ ಕೃಷ್ಣನ ವರ್ತನೆಯಿಂದ ಬೇಸರಗೊಂಡು ದುಃಖಿತರಾಗಿ ಸ್ವಗೃಹದ ದಾರಿಯನ್ನು ಹಿಡಿದರು.

01-K

XIV. ಪತ್ರಲೇಖನ ಬರೆಯುವುದು : **1 X 5 = 5**

44. ನಿಮ್ಮನ್ನು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ಕುವೆಂಪು ಬಡಾವಣೆಯ ನಿವಾಸಿ 'ಪ್ರಕಾಶ' ಎಂದು ಭಾವಿಸಿಕೊಂಡು, ಬಡಾವಣೆಯ ಸಾರ್ವಜನಿಕ ಗ್ರಂಥಾಲಯಕ್ಕೆ ಹೊಸ ಪುಸ್ತಕಗಳನ್ನು ಒದಗಿಸುವಂತೆ ಕೋರಿ, ಜಿಲ್ಲಾ ಕೇಂದ್ರ ಗ್ರಂಥಾಲಯದ ಮುಖ್ಯಾಧಿಕಾರಿಗೆ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಚಿತ್ರದುರ್ಗದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ದೀಪಾ' ಎಂದು ಭಾವಿಸಿಕೊಂಡು, ದಸರಾ ರಜೆಗೆ ನಿಮ್ಮೂರಿಗೆ ಆಹ್ವಾನಿಸಿ, ಉಡುಪಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 'ನಂದಿನಿ' ಎಂಬ ಹೆಸರಿನ ಗೆಳತಿಗೆ ಪತ್ರವನ್ನು ಬರೆಯಿರಿ.

ಉತ್ತರ :

ಸ್ಥಳ : ಶಿಕಾರಿಪುರ
ದಿನಾಂಕ : ೨೩. ೦೬. ೨೦೨೬

ಇವರಿಂದ,
ಪ್ರಕಾಶ
ಕುವೆಂಪು ಬಡಾವಣೆ
ಶಿಕಾರಿಪುರ
ಶಿವಮೊಗ್ಗ ಜಿಲ್ಲೆ

ಇವರಿಗೆ,
ಮಾನ್ಯ ಮುಖ್ಯಾಧಿಕಾರಿಗಳು
ಜಿಲ್ಲಾ ಕೇಂದ್ರ ಗ್ರಂಥಾಲಯ
ಶಿವಮೊಗ್ಗ

ಮಾನ್ಯರೆ,

ವಿಷಯ : ಬಡಾವಣೆಯ ಸಾರ್ವಜನಿಕ ಗ್ರಂಥಾಲಯಕ್ಕೆ ಹೊಸ ಪುಸ್ತಕಗಳನ್ನು ಒದಗಿಸುವಂತೆ ಕೋರಿ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶಿಕಾರಿಪುರದ ಕುವೆಂಪು ಬಡಾವಣೆಯ ನಿವಾಸಿ ಪ್ರಕಾಶ ಎಂಬ ಹೆಸರಿನವನಾದ ನಾನು ತಮ್ಮಲ್ಲಿ ವಿನಂತಿಸುವುದೇನೆಂದರೆ, ಕುವೆಂಪು ಬಡಾವಣೆಯಲ್ಲಿ ಇರುವ ಸಾರ್ವಜನಿಕ ಗ್ರಂಥಾಲಯಕ್ಕೆ ಪ್ರತಿದಿನ ನೂರಾರು ವಿದ್ಯಾರ್ಥಿಗಳು, ಹಿರಿಯ ನಾಗರಿಕರು ಮತ್ತು ಓದುಗರು ಜ್ಞಾನಾರ್ಜನೆಗಾಗಿ ಬರುತ್ತಾರೆ. ಇತ್ತೀಚಿನ ದಿನಗಳಲ್ಲಿ ಅವರ ಸಂಖ್ಯೆ ಹೆಚ್ಚಾಗಿದೆ. ಆದರೆ ಪ್ರಸ್ತುತ ಗ್ರಂಥಾಲಯದಲ್ಲಿರುವ ಬಹುತೇಕ ಪುಸ್ತಕಗಳು ಹಳೆಯದಾಗಿವೆ. ಪ್ರಮುಖವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳ ಇತ್ತೀಚಿನ ಆವೃತ್ತಿಯ ಪುಸ್ತಕಗಳು, ಹೊಸ ಕಾದಂಬರಿಗಳು, ವಿಜ್ಞಾನ, ತಂತ್ರಜ್ಞಾನದ ಪುಸ್ತಕಗಳು ಮತ್ತು ಮಕ್ಕಳ ಜ್ಞಾನ ವಿಕಾಸದ ಪುಸ್ತಕಗಳ ಕೊರತೆ ಎದ್ದು ಕಾಣುತ್ತಿದೆ. ಇದರಿಂದಾಗಿ ಪರೀಕ್ಷೆಗಳಿಗೆ ಸಿದ್ಧರಾಗುತ್ತಿರುವ ಸ್ಥಳೀಯ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ದಯವಿಟ್ಟು ಓದುಗರ ಹಿತದೃಷ್ಟಿಯಿಂದ ಬಡಾವಣೆಯ ಗ್ರಂಥಾಲಯಕ್ಕೆ ಹೊಸ ಪುಸ್ತಕಗಳನ್ನು ಮತ್ತು ನಿಯತಕಾಲಿಕೆಗಳನ್ನು ಶೀಘ್ರವಾಗಿ ಒದಗಿಸಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇನೆ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ
ಪ್ರಕಾಶ
(ಬಡಾವಣೆಯ ಪ್ರಮುಖರ ಸಹಿಗಳಿವೆ)

ಹೊರ ವಿಳಾಸ :

ಇವರಿಗೆ, ಮಾನ್ಯ ಮುಖ್ಯಾಧಿಕಾರಿಗಳು ಜಿಲ್ಲಾ ಕೇಂದ್ರ ಗ್ರಂಥಾಲಯ ಶಿವಮೊಗ್ಗ	ಇವರಿಂದ, ಪ್ರಕಾಶ ಕುವೆಂಪು ಬಡಾವಣೆ ಶಿಕಾರಿಪುರ, ಶಿವಮೊಗ್ಗ ಜಿಲ್ಲೆ

[Turn over

01-K

ಅಥವಾ

ಉತ್ತರ : ಕ್ಷೇಮ

ಶ್ರೀ

ಇವರಿಂದ,
ದೀಪಾ
೧೦ ನೆಯ ತರಗತಿ
ಸರ್ಕಾರಿ ಪ್ರೌಢಶಾಲೆ
ಚಿತ್ರದುರ್ಗ
ದಿನಾಂಕ : ೩೦.೦೯.೨೦೨೬

ಪ್ರೀತಿಯ,

ಗೆಳತಿಯಾದ ನಂದಿನಿಗೆ ನಿನ್ನ ಗೆಳತಿ ದೀಪಾ ಮಾಡುವ ವಂದನೆಗಳು. ನಾನು ಇಲ್ಲಿ ಕ್ಷೇಮವಾಗಿದ್ದೇನೆ. ನೀನು ಅಲ್ಲಿ ಕ್ಷೇಮವಾಗಿರುವೆ ಎಂದು ನಂಬಿರುತ್ತೇನೆ.

ನನ್ನ ವಿದ್ಯಾಭ್ಯಾಸ ಇಲ್ಲಿ ಚೆನ್ನಾಗಿ ನಡೆಯುತ್ತಿದೆ. ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಲು ವೇಳಾಪಟ್ಟಿ ತಯಾರಿಸಿಕೊಂಡು ಓದುತ್ತಿದ್ದೇನೆ. ಅಂದ ಹಾಗೆ ಈ ಪತ್ರ ಬರೆದ ಕಾರಣವೇನೆಂದರೆ, ಈ ವರ್ಷದ ದಸರಾ ರಜೆಯು ದಿನಾಂಕ ೦೩.೧೦.೨೦೨೬ ರಿಂದ ಪ್ರಾರಂಭವಾಗುವುದರಿಂದ ನಾವೆಲ್ಲ ಸ್ನೇಹಿತೆಯರು ಒಟ್ಟಿಗೆ ಸೇರಿ ದಸರಾ ಹಬ್ಬವನ್ನು ಮತ್ತು ರಜೆಯ ದಿನಗಳನ್ನು ಕಳೆಯಬೇಕೆಂಬುದು ನನ್ನ ಇಚ್ಛೆಯಾಗಿದೆ. ಪ್ರಾಥಮಿಕ ಶಾಲೆಯ ಸ್ನೇಹಿತರೆಲ್ಲ ನಮ್ಮ ಮನೆಯಲ್ಲಿ ನಾಲ್ಕೈದು ದಿನಗಳ ಮಟ್ಟಿಗೆ ಸೇರೋಣ. ಈಗಾಗಲೇ ಲಾವಣ್ಯ, ಕೀರ್ತನಾ, ಸಂಧ್ಯಾ, ಸ್ನೇಹಾ, ರೇಖಾ, ಸಹನಾರೊಂದಿಗೆ ಮಾತನಾಡಿದ್ದೇನೆ. ಅವರೆಲ್ಲರೂ ಬರಲು ಒಪ್ಪಿಗೆ ಸೂಚಿಸಿದ್ದಾರೆ. ನೀನೂ ಸಹ ಬರಬೇಕೆಂಬುದು ನನ್ನ ಇಚ್ಛೆಯಾಗಿದೆ. ನಾವೆಲ್ಲ ಒಟ್ಟಿಗೆ ಕುಳಿತು ಮಾತನಾಡಿ ಬಹಳ ದಿನಗಳೇ ಆಗಿವೆ. ನಿನ್ನ ಮನೆಯಲ್ಲಿ ಒಪ್ಪಿಗೆ ಪಡೆದುಕೊಂಡು ಬಾ. ನೀನು ಬರುವ ನಿರೀಕ್ಷೆಯಲ್ಲಿ ಇದ್ದೇನೆ. ರಜೆಯ ದಿನಗಳನ್ನು ಅರ್ಥಪೂರ್ಣವಾಗಿ ಕಳೆದು ಈ ಬಾರಿಯ ದಸರಾ ರಜೆಯನ್ನು ಸ್ಮರಣೀಯವಾಗಿಸೋಣ.

ಮನೆಯಲ್ಲಿ ನಿನ್ನ ತಂದೆ, ತಾಯಿಯವರಿಗೂ ನನ್ನ ನಮಸ್ಕಾರಗಳನ್ನು ತಿಳಿಸು.

ಇಂತಿ ನಿನ್ನ ಪ್ರೀತಿಯ ಗೆಳತಿ
ದೀಪಾ

ಹೊರ ವಿಳಾಸ :

ಇವರಿಗೆ, ನಂದಿನಿ ೧೦ನೇ ತರಗತಿ ಸರ್ಕಾರಿ ಪ್ರೌಢಶಾಲೆ ಚಿತ್ರದುರ್ಗ	ಇವರಿಂದ, ದೀಪಾ ೧೦ನೇ ತರಗತಿ ಸರ್ಕಾರಿ ಪ್ರೌಢಶಾಲೆ ಉಡುಪಿ

XV. ಪ್ರಬಂಧ ಬರೆವಣಿಗೆ : **1 X 5 = 5**

45. ರಾಷ್ಟ್ರೀಯ ಹಬ್ಬಗಳ ಮಹತ್ತ್ವ.

ಅಥವಾ

ಕರ್ನಾಟಕದ ಪ್ರಮುಖ ಪ್ರವಾಸಿ ತಾಣಗಳು.

ಉತ್ತರ : ರಾಷ್ಟ್ರೀಯ ಹಬ್ಬಗಳ ಮಹತ್ತ್ವ :

ಪೀಠಿಕೆ : ರಾಷ್ಟ್ರೀಯ ಹಬ್ಬಗಳು ದೇಶದ ಏಕತೆ, ಸಾಕ್ಷರತೆ ಮತ್ತು ಹೆಮ್ಮೆಯ ಸಂಕೇತವಾಗಿವೆ. ಭಾರತದಂತಹ ವೈವಿಧ್ಯಮಯ ಸಂಸ್ಕೃತಿ ಹೊಂದಿರುವ ದೇಶದಲ್ಲಿ, ರಾಷ್ಟ್ರೀಯ ಹಬ್ಬಗಳು ಎಲ್ಲ ಧರ್ಮ, ಜಾತಿ ಮತ್ತು ಪ್ರಾಂತ್ಯಗಳ ಜನರನ್ನು ಒಂದೇ ವೇದಿಕೆಯಲ್ಲಿ ಒಟ್ಟುಗೂಡಿಸುವ ಶಕ್ತಿಯನ್ನು ಹೊಂದಿವೆ. ಈ ಹಬ್ಬಗಳು ಕೇವಲ ರಜಾದಿನಗಳಲ್ಲ, ಬದಲಿಗೆ ದೇಶದ ಇತಿಹಾಸ ಮತ್ತು ವೀರರ ತ್ಯಾಗವನ್ನು ನೆನಪಿಸುವ ಪವಿತ್ರ ದಿನಗಳಾಗಿವೆ.

ವಿಷಯ ನಿರೂಪಣೆ : ಭಾರತದಲ್ಲಿ ಪ್ರಮುಖವಾಗಿ ಮೂರು ರಾಷ್ಟ್ರೀಯ ಹಬ್ಬಗಳನ್ನು ದೇಶಾದ್ಯಂತ ಅತ್ಯಂತ ಸಡಗರ, ಸಂಭ್ರಮ ಹಾಗೂ ಗೌರವದಿಂದ ಆಚರಿಸಲಾಗುತ್ತದೆ.

01-K

ಸ್ವಾತಂತ್ರ್ಯ ದಿನಾಚರಣೆ (ಆಗಸ್ಟ್ ೧೫) : ಬ್ರಿಟಿಷರ ದಾಸ್ಯದಿಂದ ಭಾರತ ಮುಕ್ತವಾದ ದಿನವನ್ನು ಇದು ನೆನಪಿಸುತ್ತದೆ. ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣತ್ಯಾಗ ಮಾಡಿದ ವೀರ ಯೋಧರು ಮತ್ತು ನಾಯಕರನ್ನು ಈ ದಿನ ಸ್ಮರಿಸಲಾಗುತ್ತದೆ.

ಗಣರಾಜ್ಯೋತ್ಸವ (ಜನವರಿ ೨೬) : ಭಾರತದ ಸಂವಿಧಾನ ಜಾರಿಗೆ ಬಂದು, ನಮ್ಮ ದೇಶವು ಸಾರ್ವಭೌಮ, ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ಹೊರಹೊಮ್ಮಿದ ದಿನವಿದು. ದೆಹಲಿಯ ರಾಜಪಥ್‌ನಲ್ಲಿ ನಡೆಯುವ ಪೆರೇಡ್ ಈ ದಿನದ ಪ್ರಮುಖ ಆಕರ್ಷಣೆಯಾಗಿದೆ.

ಗಾಂಧಿ ಜಯಂತಿ (ಅಕ್ಟೋಬರ್ ೨) : ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಜನ್ಮದಿನವನ್ನು ರಾಷ್ಟ್ರೀಯ ಹಬ್ಬವಾಗಿ ಆಚರಿಸಲಾಗುತ್ತದೆ. ಇಡೀ ವಿಶ್ವವೇ ಈ ದಿನವನ್ನು ಅಹಿಂಸಾ ದಿನವನ್ನಾಗಿ ಆಚರಿಸುತ್ತದೆ.

ರಾಷ್ಟ್ರೀಯ ಹಬ್ಬಗಳು ದೇಶದ ನಾಗರಿಕರಲ್ಲಿ ಹಲವಾರು ಪ್ರಮುಖ ಮೌಲ್ಯಗಳನ್ನು ಜಾಗೃತಗೊಳಿಸುತ್ತವೆ.

ಏಕತೆ ಮತ್ತು ಸಮಗ್ರತೆ : ಭಾರತವು ವಿವಿಧ ಭಾಷೆ, ಧರ್ಮ ಮತ್ತು ಆಚಾರ–ವಿಚಾರಗಳನ್ನು ಹೊಂದಿರುವ ದೇಶ. ಆದರೆ ರಾಷ್ಟ್ರೀಯ ಹಬ್ಬಗಳಂದು ನಾವೆಲ್ಲರೂ ಒಂದೇ ಎಂಬ ಭಾವನೆ ಮೂಡುತ್ತದೆ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಪ್ರತಿಯೊಬ್ಬ ನಾಗರಿಕನೂ ದೇಶದ ಧ್ವಜಕ್ಕೆ ಗೌರವ ಸಲ್ಲಿಸುತ್ತಾನೆ.

ದೇಶಭಕ್ತಿಯ ಜಾಗೃತಿ : ಇಂದಿನ ಯುವ ಪೀಳಿಗೆಗೆ ದೇಶದ ಇತಿಹಾಸ ಮತ್ತು ನಮ್ಮ ಪೂರ್ವಜರು ಪಟ್ಟ ಕಷ್ಟಗಳನ್ನು ತಿಳಿಸಲು ಈ ಹಬ್ಬಗಳು ಅತ್ಯಗತ್ಯ. ಶಾಲೆ ಮತ್ತು ಕಾಲೇಜುಗಳಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ದೇಶಪ್ರೇಮವನ್ನು ಬಿತ್ತುತ್ತವೆ.

ತ್ಯಾಗದ ಸ್ಮರಣೆ : ಇಂದು ನಾವು ಅನುಭವಿಸುತ್ತಿರುವ ಸ್ವಾತಂತ್ರ್ಯದ ಹಿಂದೆ ಲಕ್ಷಾಂತರ ದೇಶಭಕ್ತರ ಬಲಿದಾನವಿದೆ. ರಾಷ್ಟ್ರೀಯ ಹಬ್ಬಗಳು ಭಗತ್ ಸಿಂಗ್, ಮಹಾತ್ಮಾ ಗಾಂಧಿ, ಸುಭಾಷ್ ಚಂದ್ರ ಬೋಸ್ ಮುಂತಾದ ಮಹನೀಯರ ಆದರ್ಶಗಳನ್ನು ಮರುಕಳಿಸುವಂತೆ ಮಾಡುತ್ತವೆ.

ಜವಾಬ್ದಾರಿಯ ಅರಿವು : ಗಣರಾಜ್ಯೋತ್ಸವದಂತಹ ದಿನಗಳು ಸಂವಿಧಾನ ನಮಗೆ ನೀಡಿರುವ ಹಕ್ಕುಗಳ ಜೊತೆಗೆ, ನಾವು ದೇಶಕ್ಕೆ ಸಲ್ಲಿಸಬೇಕಾದ ಕರ್ತವ್ಯಗಳನ್ನು ನೆನಪಿಸುತ್ತವೆ. ಇದು ಪ್ರತಿಯೊಬ್ಬರನ್ನು ಜವಾಬ್ದಾರಿಯುತ ನಾಗರಿಕರನ್ನಾಗಿ ಮಾಡುತ್ತದೆ.

ರಾಷ್ಟ್ರೀಯ ಹಬ್ಬಗಳನ್ನು ದೇಶದ ಪ್ರತಿಯೊಂದು ಹಳ್ಳಿ, ಪಟ್ಟಣ ಮತ್ತು ನಗರಗಳಲ್ಲಿ ಆಚರಿಸಲಾಗುತ್ತದೆ. ಶಾಲೆಗಳು, ಕಾಲೇಜುಗಳು, ಸರ್ಕಾರಿ ಕಚೇರಿಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಲಾಗುತ್ತದೆ. ರಾಷ್ಟ್ರಗೀತೆಯನ್ನು ಹಾಡಿ, ಸಿಹಿ ಹಂಚಿ ಸಂಭ್ರಮಿಸಲಾಗುತ್ತದೆ. ದೇಶದ ಪ್ರಧಾನಮಂತ್ರಿಯವರು ಕೆಂಪುಕೋಟೆಯ ಮೇಲೆ ಧ್ವಜಾರೋಹಣ ಮಾಡಿ ದೇಶವನ್ನುದ್ದೇಶಿಸಿ ಭಾಷಣ ಮಾಡುತ್ತಾರೆ. ಈ ದಿನಗಳಲ್ಲಿ ದೇಶದ ರಕ್ಷಣೆಗಾಗಿ ಹೋರಾಡಿದ ವೀರ ಯೋಧರಿಗೆ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತದೆ.

ಉಪಸಂಹಾರ : ರಾಷ್ಟ್ರೀಯ ಹಬ್ಬಗಳು ಕೇವಲ ಒಂದು ದಿನದ ಆಚರಣೆಗೆ ಸೀಮಿತವಾಗಬಾರದು. ಅವುಗಳು ಬಿತ್ತುವ ದೇಶಪ್ರೇಮ, ಸೋದರಭಾವ ಮತ್ತು ಏಕತೆಯ ಸಂದೇಶ ನಮ್ಮ ದೈನಂದಿನ ಜೀವನದಲ್ಲಿಯೂ ಪ್ರತಿಫಲಿಸಬೇಕು. ದೇಶದ ಪ್ರಗತಿಗಾಗಿ ಮತ್ತು ಶಾಂತಿಗಾಗಿ ನಾವೆಲ್ಲರೂ ಶ್ರಮಿಸುವುದೇ ಈ ಹಬ್ಬಗಳಿಗೆ ನಾವು ನೀಡುವ ನಿಜವಾದ ಗೌರವವಾಗಿದೆ.

"ಮಾತೃ ಧರ್ಮಗಳನೇಕ, ಮಾತೃ ಭಾಷೆಗಳನೇಕ ಆದರೆ ಮಾತೃಭೂಮಿ ಒಂದೇ ಅದು ಭಾರತ. ಇದಕ್ಕಾಗಿ ದುಡಿಯೋಣ.
ಇದಕ್ಕಾಗಿ ಮಡಿಯೋಣ"

ಅಥವಾ

ಉತ್ತರ : ಕರ್ನಾಟಕದ ಪ್ರಮುಖ ಪ್ರವಾಸಿ ತಾಣಗಳು :

ಪೀಠಿಕೆ : "ಒಂದು ರಾಜ್ಯ, ಹಲವು ಜಗತ್ತು" (One State, Many Worlds) ಎಂಬುದು ಕರ್ನಾಟಕ ಪ್ರವಾಸೋದ್ಯಮದ ಅಧಿಕೃತ ಘೋಷವಾಕ್ಯವಾಗಿದೆ. ಇದು ಅಕ್ಷರಶಃ ಸತ್ಯ. ಕರ್ನಾಟಕವು ಭಾರತದ ಅತ್ಯಂತ ವೈವಿಧ್ಯಮಯ ಮತ್ತು ಸುಂದರವಾದ ರಾಜ್ಯಗಳಲ್ಲಿ ಒಂದಾಗಿದೆ. ಇಲ್ಲಿನ ಕಡಿದಾದ ಪಶ್ಚಿಮ ಘಟ್ಟಗಳ ಗಿರಿಧಾಮಗಳು, ವಿಶಾಲವಾದ ಕರಾವಳಿ ತೀರಗಳು, ಭವ್ಯವಾದ ಐತಿಹಾಸಿಕ ಅರಮನೆಗಳು, ವಿಶಿಷ್ಟ ಶಿಲ್ಪಕಲೆಯ ದೇವಸ್ಥಾನಗಳು ಮತ್ತು ದಟ್ಟವಾದ ವನ್ಯಜೀವಿ ಅರಣ್ಯಗಳು ಪ್ರಪಂಚದಾದ್ಯಂತದ ಪ್ರವಾಸಿಗರನ್ನು ಆಕರ್ಷಿಸುತ್ತವೆ. ಇತಿಹಾಸ, ಪ್ರಕೃತಿ ಮತ್ತು ಆಧ್ಯಾತ್ಮದ ಅದ್ಭುತ ಸಂಗಮವೇ ನಮ್ಮ ಕರ್ನಾಟಕ.

[Turn over

01-K

ವಿಷಯ ನಿರೂಪಣೆ :

ಐತಿಹಾಸಿಕ ಮತ್ತು ಪರಂಪರೆಯ ತಾಣಗಳು : ಕರ್ನಾಟಕದ ಇತಿಹಾಸವು ಅತ್ಯಂತ ಭವ್ಯವಾದುದು. ಜಗತ್ಪ್ರಸಿದ್ಧ ಹಂಪೆ ವಿಜಯನಗರ ಸಾಮ್ರಾಜ್ಯದ ವೈಭವವನ್ನು ಸಾರುವ ಯುನೆಸ್ಕೋ ವಿಶ್ವ ಪರಂಪರೆಯ ತಾಣವಾಗಿದೆ. ಇಲ್ಲಿನ ವಿರೂಪಾಕ್ಷ ದೇವಸ್ಥಾನ, ಕಲ್ಲಿನರಥ ಮತ್ತು ಸಾಸಿವೆಕಾಳು ಗಣೇಶನ ಮೂರ್ತಿಗಳು ಅಂದಿನ ಶಿಲ್ಪಕಲೆಯ ಉತ್ತುಂಗಕ್ಕೆ ಸಾಕ್ಷಿಯಾಗಿವೆ. ಚಾಲುಕ್ಯರ ರಾಜಧಾನಿಯಾಗಿದ್ದ ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲು ಕಲ್ಲಿನ ಗುಹಾಂತರ ದೇವಾಲಯಗಳಿಗೆ ಪ್ರಸಿದ್ಧವಾಗಿವೆ. ಕರ್ನಾಟಕದ ಸಾಂಸ್ಕೃತಿಕ ರಾಜಧಾನಿಯಾದ ಮೈಸೂರು ತನ್ನ ಭವ್ಯವಾದ ಮೈಸೂರು ಅರಮನೆ ಮತ್ತು ಜಗತ್ಪ್ರಸಿದ್ಧ ದಸರಾ ಮಹೋತ್ಸವಕ್ಕೆ ಹೆಸರಾಗಿದೆ. ಇದರೊಂದಿಗೆ ಹೊಯ್ಸಳ ಶೈಲಿಯ ಅದ್ಭುತ ಕೆತ್ತನೆಗಳುಳ್ಳ ಬೇಲೂರು ಮತ್ತು ಹಳೇಬೀಡು ದೇವಾಲಯಗಳ ಶಿಲ್ಪಕಲೆಯು ಪ್ರವಾಸಿಗರನ್ನು ಮಂತ್ರಮುಗ್ಧರನ್ನಾಗಿಸುತ್ತದೆ.

ಪ್ರಕೃತಿ ಸೌಂದರ್ಯ ಮತ್ತು ಗಿರಿಧಾಮಗಳು : ಪ್ರಕೃತಿ ಪ್ರೇಮಿಗಳಿಗೆ ಕರ್ನಾಟಕವು ಸ್ವರ್ಗಸಮಾನವಾಗಿದೆ. **"ಭಾರತದ ಸ್ಕಾಟ್‌ಲ್ಯಾಂಡ್"** ಎಂದೇ ಕರೆಯಲ್ಪಡುವ ಕೊಡಗು ತನ್ನ ಹಸಿರು ಕಾಫಿ ತೋಟಗಳು, ಮಂಜು ಮುಸುಕಿದ ಬೆಟ್ಟಗಳು ಮತ್ತು ಅಬ್ಬಿ ಜಲಪಾತಗಳಿಂದ ಪ್ರವಾಸಿಗರ ನೆಚ್ಚಿನ ತಾಣವಾಗಿದೆ. ಕಾಫಿಯ ತವರೂರಾದ ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಕರ್ನಾಟಕದ ಅತಿ ಎತ್ತರದ ಶಿಖರ ಮುಳ್ಳಯ್ಯನಗಿರಿ ಮತ್ತು ಬಾಬಾಬುಡನ್‌ಗಿರಿ ಬೆಟ್ಟಗಳು ಚಾರಣಿಗರಿಗೆ ಸೂಕ್ತವಾದ ಜಾಗಗಳಾಗಿವೆ. ಇನ್ನು ಶಿವಮೊಗ್ಗ ಜಿಲ್ಲೆಯಲ್ಲಿರುವ ಭವ್ಯ ಜೋಗ್‌ಫಾಲ್ಸ್ ಶರಾವತಿ ನದಿಯಿಂದ ಸೃಷ್ಟಿಯಾಗುವ ಭಾರತದ ಅತ್ಯಂತ ಎತ್ತರದ ನೇರ ಜಲಪಾತಗಳಲ್ಲಿ ಒಂದಾಗಿದ್ದು, ಮಳೆಗಾಲದಲ್ಲಿ ಕಣ್ಣಿಗೆ ಹಬ್ಬವನ್ನು ಉಂಟುಮಾಡುತ್ತದೆ.

ಸುಂದರ ಕರಾವಳಿ ಮತ್ತು ಬೀಚ್‌ಗಳು : ಕರ್ನಾಟಕವು ಸುಮಾರು ೩೨೦ ಕಿಲೋಮೀಟರ್ ಉದ್ದದ ಸುಂದರ ಕರಾವಳಿಯನ್ನು ಹೊಂದಿದೆ. ಉತ್ತರ ಕನ್ನಡ ಜಿಲ್ಲೆಯ ಗೋಕರ್ಣ ಆಧ್ಯಾತ್ಮಿಕ ಮತ್ತು ಪ್ರಕೃತಿ ಸೌಂದರ್ಯದ ಅಪೂರ್ವ ಸಂಗಮವಾಗಿದೆ. ಇಲ್ಲಿನ ಪ್ರಶಾಂತವಾದ ಓಂ ಬೀಚ್, ಕುಡ್ಲೆ ಬೀಚ್ ಮತ್ತು ಪ್ರಸಿದ್ಧ ಮಹಾಬಲೇಶ್ವರ ದೇವಸ್ಥಾನ ದೇಶ–ವಿದೇಶಗಳ ಪ್ರವಾಸಿಗರನ್ನು ಆಕರ್ಷಿಸುತ್ತವೆ. ವಿಶ್ವದ ಎರಡನೇ ಅತಿ ಎತ್ತರದ ಬೃಹತ್ ಶಿವನ ಪ್ರತಿಮೆ ಹೊಂದಿರುವ ಮುರುಡೇಶ್ವರ ಕರಾವಳಿ ಪ್ರವಾಸೋದ್ಯಮದ ಪ್ರಮುಖ ಕೇಂದ್ರವಾಗಿದೆ. ಇದರೊಂದಿಗೆ ಉಡುಪಿಯ ಕೃಷ್ಣ ಮಠ, ಕಾಪು ಬೀಚ್ ಮತ್ತು ಒಂದೆಡೆ ಸಮುದ್ರ ಮತ್ತೊಂದೆಡೆ ನದಿಯನ್ನು ಹೊಂದಿರುವ ವಿಶಿಷ್ಟ ಮರವಂತೆ ಬೀಚ್ ಪ್ರವಾಸಿಗರಿಗೆ ವಿಶಿಷ್ಟ ಅನುಭವ ನೀಡುತ್ತವೆ.

ವನ್ಯಜೀವಿ ಮತ್ತು ಸಾಹಸ ಪ್ರವಾಸೋದ್ಯಮ : ವನ್ಯಜೀವಿ ಪ್ರೇಮಿಗಳಿಗಾಗಿ ಕರ್ನಾಟಕದಲ್ಲಿ ಸಮೃದ್ಧವಾದ ಅರಣ್ಯ ಪ್ರದೇಶಗಳಿವೆ. ಬಂಡೀಪುರ ಮತ್ತು ನಾಗರಹೊಳೆ ರಾಷ್ಟ್ರೀಯ ಉದ್ಯಾನಗಳು ಹುಲಿ ಸಂರಕ್ಷಿತ ಪ್ರದೇಶಗಳಾಗಿದ್ದು, ವನ್ಯಜೀವಿ ಸಫಾರಿಗೆ ಅತ್ಯಂತ ಪ್ರಸಿದ್ಧವಾಗಿವೆ. ಇಲ್ಲಿ ಆನೆಗಳು, ಚಿರತೆಗಳು ಮತ್ತು ಅಪರೂಪದ ಪಕ್ಷಿಗಳನ್ನು ವೀಕ್ಷಿಸಬಹುದು. ಇನ್ನು ಉತ್ತರ ಕನ್ನಡದ ದಾಂಡೇಲಿ ದಟ್ಟವಾದ ಕಾಡು ಮತ್ತು ಕಾಳಿ ನದಿಯಲ್ಲಿ ನಡೆಯುವ ರಿವರ್ ರಾಫ್ಟಿಂಗ್ ನಂತಹ ಸಾಹಸ ಕ್ರೀಡೆಗಳಿಗೆ ಹೆಸರುವಾಸಿಯಾಗಿದೆ.

ಉಪಸಂಹಾರ : ಒಟ್ಟಾರೆಯಾಗಿ ಹೇಳುವುದಾದರೆ, ಕರ್ನಾಟಕವು ಪ್ರತಿಯೊಬ್ಬ ಪ್ರವಾಸಿಯ ಆಸಕ್ತಿಗೂ ಒಪ್ಪುವಂತಹ ವೈವಿಧ್ಯಮಯ ತಾಣಗಳನ್ನು ಹೊಂದಿದೆ. ಇದು ಕೇವಲ ನೋಡುವ ಜಾಗವಲ್ಲ, ಭಾರತದ ಶ್ರೀಮಂತ ಸಂಸ್ಕೃತಿ ಮತ್ತು ಪ್ರಕೃತಿಯನ್ನು ಅನುಭವಿಸುವ ಸುಂದರ ವೇದಿಕೆಯಾಗಿದೆ. ಪ್ರವಾಸೋದ್ಯಮವು ರಾಜ್ಯದ ಆರ್ಥಿಕತೆಗೆ ಕೊಡುಗೆ ನೀಡುವುದರ ಜೊತೆಗೆ, ನಮ್ಮ ಪರಂಪರೆಯನ್ನು ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ನಮ್ಮ ನಾಡಿನ ಈ ಅಮೂಲ್ಯ ಪ್ರವಾಸಿ ತಾಣಗಳನ್ನು ಸ್ವಚ್ಛವಾಗಿಟ್ಟುಕೊಂಡು ಮುಂದಿನ ಪೀಳಿಗೆಗೆ ಉಳಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ.

"ಪ್ರವಾಸವು ಜ್ಞಾನದ ಕಣ್ಣುಗಳನ್ನು ತೆರೆಸುತ್ತದೆ."